1988ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ) (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಕೆ. ಬಿ. ಮಲ್ಲಪ್ಪ.—(ನಿಯಂತ್ರಿಕ ಮಾರುಕಟ್ಟೆ ಮತ್ತು ಖಿಷ್ಕಿ ಜಮೀನಾಂ ಅಭಿವೃದ್ಧಿ ರಾಜ್ಯಮಂತ್ರಿಗಳು) ಸರಿಯಲೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ) (ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈ ಬಗ್ಗೆ ಎಕ್ಸ್‌ಪ್ಲೇನ್ ಮಾಡಬಹುದು.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಇದು ತುಂಬಾ ಚಿಕ್ಕದಾದ ತಿದ್ದುಪಡಿ ಮಸೂದೆ. ಈ ಆಕ್ಟ್‌ನಲ್ಲಿ ೬೩ನೇ ಸೆಕ್ಷನ್‌ಗೆ ಸಣ್ಣದೊಂದು ತಿದ್ದುಪಡಿಯನ್ನು ತಂದಿದ್ದೇವೆ. ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಮಾರ್ಕೆಟ್ ಸಮಿತಿಗಳಿಂದ ಸ್ವಲ್ಪ ಏಡಿಗೆ ಕೊಡಬೇಕೆಂದು ಇದೆ. ಮಾನ್ಯ ಸದಸ್ಯರುಗಳೆಲ್ಲರೂ ಇದನ್ನು ಒಪ್ಪುತ್ತಾರೆ, ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—(ಗದಗ) ಮಾನ್ಯ ಸಭಾಧ್ಯಕ್ಷರೆ, ಈ ವಿಷಯದಲ್ಲಿ ನಾನು ತಿದ್ದುಪಡಿ ಮೂವ್ ಮಾಡುವವನಿದ್ದೇನೆ. ಪೂರ್ವದಲ್ಲಿ ಎಂಡೂ ಕಡೆಯ ಸದಸ್ಯರುಗಳು ಕೂಡಿ ಒಪ್ಪಿದಂತಹ ವಿಷಯ,

ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಬೇಕಾಗುವಂಥ ಹಣವನ್ನು ತಮ್ಮ ಸರ್ಕಾರದಿಂದ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಯಾವುದಾದರೂ ಸಂಸ್ಥೆಯಿಂದ ಸ್ವಲ್ಪವಾದರೂ ಬರಲಿಕ್ಕೆ ಬೇಕು. ಇಲ್ಲದಿದ್ದರೆ ಸೆಂಟ್ರಲ್ ಗವರ್ನಮೆಂಟ್‌ನಿಂದ ಬರುವುದಕ್ಕೆ ತಡವಾಗುತ್ತದೆ ಎನ್ನುವ ದೃಷ್ಟಿಯಿಂದ ಒಪ್ಪಿದ್ದೇವೆ. ಈಗ ಸಹಕಾರ ಸಂಘದೊಳಗೆ ಹಣ ಕೊಡಬೇಕಾದರೆ ಸಹಕಾರ ಸಚಿವರ ಪರವಾನಗಿ ಪಡೆದುಕೊಂಡು ದೇಣಿಗೆ ಕೊಡಲಿಕ್ಕೆ ಬರುತ್ತದೆ. ಆದರೆ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್‌ನೊಳಗೆ ಹಣ ಕೊಡಬೇಕೆಂದು ಸರ್ವಾನುಮತದಿಂದ ತೀರ್ಮಾನ ಆದರೂ ಸಹಿತ ಸರ್ಕಾರ ಪರವಾನಗಿ ಕೊಟ್ಟರೂ ಕೊಡಲಾಗದ ಪರಿಸ್ಥಿತಿ ಇದೆ. ಆದಕ್ಕಾಗಿ ಸೆಕ್ಷನ್ ೬೩ನ್ನು ಅಮೆಂಡ್‌ಮೆಂಟ್ ಮಾಡಬೇಕೆಂಬ ವಿಷಯ ಬಂತು. ಇದಕ್ಕಿಂತ ಹೆಚ್ಚಿಗೆ ಇದರೊಳಗೆ ಯಾವುದೇ ಅಮೆಂಡ್‌ಮೆಂಟ್ ಇಲ್ಲ. ಈ ಅಮೆಂಡಮೆಂಟ್ ಅಪ್ರೂವ್ ಆದರೂ ಸಹಿತ ಒಮ್ಮೆಗೇ ಹಣ ಏನೂ ಹೋಗಿಬಿಡುವುದಿಲ್ಲ. ಎಲ್ಲಿ ಹಣದ ಕೊರತೆ ಬೀಳುತ್ತದೆ ಮತ್ತು ಯಾವಾಗ ಎ ಪಿ.ಎಂ.ಸಿ ಗೆ ಕೊಡಬೇಕೆಂದು ಒಪ್ಪುತ್ತೇವೆ ಅವರಾಗಿಯೇ ಒಪ್ಪಿ ಠರಾವು ಮಾಡಿದರೆ ಸರ್ಕಾರ ಮಂಜೂರಾತಿ ಕೊಟ್ಟರೆ ಮಾತ್ರ ಕೊಡಲಿಕ್ಕೆ ಬರುತ್ತದೆ. ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿ ಇರುವುದು ಯಾವುದರ ಸಲುವಾಗಿ ಎಂದರೆ ಅಗ್ರಿಕಲ್ಚರಲ್ ಸೈನ್ಸ್‌ನ್ನು ಡೆವಲಪ್ ಮಾಡುವುದಕ್ಕೆ. ಆದರೆ ದುರ್ದೈವದಿಂದ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಕಮಿಟಿ ಸೆಸ್ ಹಣವನ್ನು ಕೂಡಿಸಿದರೂ. ಲಕ್ಷಾವಧಿ ಹಣ ಹಾಗೆ ಉಳಿದರೂ ಸಹಿತ ಅದನ್ನು ಸದ್ವಿನಿಯೋಗ ಮಾಡಲಿಕ್ಕೆ ಅವಕಾಶ ಇಲ್ಲ. ಅಗ್ರಿಕಲ್ಚರಲ್ ಸೈನ್ಸ್‌ನ್ನು ಡೆವಲಪ್ ಮಾಡತಕ್ಕಂಥ ಯಾವದೇ ಸಂಸ್ಥೆಗಳು ಯಾವುದೇ ಇದ್ದರೂ ಅವುಗಳಿಗೆ ಸಹಾಯ ಮಾಡುವುದು ಅವಶ್ಯಕ. ಈ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಂಥ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) —ಸನ್ಮಾನ್ಯ ಮಂತ್ರಿಗಳು ಮಾಡಿದಂಥ ತಿದ್ದುಪಡಿಗೆ ನನ್ನದು ಬೆಂಬಲ ಇದೆ. ಆದರೆ ಇದರಲ್ಲಿ ಕೇವಲ ಆರ್ಟಿಕಲ್ ೬೩ಕ್ಕೆ ಏನು ತಿದ್ದುಪಡಿಯನ್ನು ತಂದಿದ್ದೀರಿ, ಅದು

> "With the prior approval of the State Government donate funds to any agricultural University to impart instructions in Agricultural Engineering and Research".

ಎಂದು ಆಷ್ಟೇ ಇದೆ. ಆದರೆ ತಮಗೆ ಗೊತ್ತಿರುವ ಹಾಗೆ ಎಲ್ಲಾ ರೈತರಿಂದ ಇವತ್ತು ಟ್ಯಾಕ್ಸ್‌ನ್ನು ಕಲೆಕ್ಟ್ ಮಾಡಿಕೊಂಡು, ಸೆಸ್‌ನ್ನು ಕಲೆಕ್ಟ್ ಮಾಡಿಕೊಂಡು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್ ಒಳ್ಳೆಯ ರೀತಿಯಿಂದ ಆಗಬೇಕು. ಮತ್ತು ರೈತರಿಗೆ ಒಳ್ಳೆಯ ಪ್ರಮಾಣದ ಬೆಲೆ ಸಿಗಬೇಕು, ಅವಶ್ಯ ಸಾಮಾನುಗಳು ಸರಿಯಾದ ಬೆಲೆಗೆ ಮಾರಾಟವಾಗಿ ಒಳ್ಳೆಯ ಬೆಲೆ ಬರಬೇಕೆಂಬ ದೃಷ್ಟಿಯಿಂದ ರೆಗ್ಯುಲೇಟೆಡ್ ಮಾರ್ಕೆಟ್‌ನ್ನು ರಾಜ್ಯದಲ್ಲಿ ಮಾಡಿದ್ದಾರೆ. ಆದರ ಜೊತೆಯಲ್ಲಿ ಈ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ರೈತ ಭವನಗಳಾಗಲೀ, ಜಾನುವಾರುಗಳಿಗೆ ಒಳ್ಳೆಯ ವ್ಯವಸ್ಥೆ ಮಂತ್ರು ಬೇರೆ ರೀತಿಯಿಂದ ಕೂಡ ಸಹಾಯ ಮಾಡಬೇಕೆಂದು ಎ.ಪಿ.ಎಂ.ಸಿ. ಉದ್ದೇಶ. ಈಗ ತಾವು ಕೇವಲ್ಲ ಡೊನೇಷನ್ ಮಾಡತಕ್ಕಂಥಾದ್ದು ರೀಸರ್ಚ್‌ಗೆಂದು ತಿದ್ದುಪಡಿಯನ್ನು ತಂದಿರುವಿರಿ. ಅನೇಕ ಜಾನುವಾರುಗಳು ಸಂತೆಗೆ ಬಂದಾಗ, ತಮ್ಮ ಅನೇಕ ಧವಸದಾನ್ಯಗಳನ್ನು ತರಂವಾಗ ತುಂಬಾ ತೊಂದರೆ ಯಾಗುತ್ತದೆ. ವೆಟರನರಿ ಹಾಸ್ಪಿಟಲ್‌ನಲ್ಲಿ ಔಷಧಿ ಕೂಡಾ ಇರುವುದಿಲ್ಲ. ಇಂತಹ ಸಮಯದಲ್ಲಿ ವೆಟರ್ನರಿ ಹಾಸ್ಪಿಟಲ್‌ಗೆ ಸಹಾಯ ಮಾಡುವುದಕ್ಕೆ ಏಕೆ ಪ್ರಾವಿಷನ್ ಮಾಡಬಾರದು ?

ಶ್ರೀ ಕೆ. ಎಚ್. ಪಾಟೀಲ್,—ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟ್‌ನಲ್ಲಿ ಈ ಪ್ರಾವಿಷನ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಬಿರ್ಗೆ.—ತಮ್ಮ ಈ ತಿದ್ದುಪಡಿ ಸೀಮಿತವಾಗಿದೆ. ನಾಳೆ ವೆಟರ್ನರಿ ಹಾಸ್ಪಿಟಲ್‌ಗೆ ಸಹಾಯ ಮಾಡಬೇಕೆಂದರೆ ಆಗುವುದಿಲ್ಲ. ಮತ್ತು ಕೆಲವು ಕಡೆ ತಮಗೆ ಗೊತ್ತಿದೆ, ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ರೋಡ್ಸ್ ಮತ್ತು ಸೇತುವೆಗಳಿಗೆ ಕೋಟ್ಯಾಂತರ ರೂಪಾಯಿ ಹಾಗೆಯೇ ಬಿದ್ದಿದ್ದರೂ ಏನನ್ನೂ ಕೊಟ್ಟಿಲ್ಲ. ಅಂತಹ ಕಡೆ ಆವಶ್ಯಕತೆ ಇದ್ದರೆ ಈ ರೈತರಿಗೆ ಧವಸದಾನ್ಯಗಳನ್ನು ತರುವುದಕ್ಕೆ ರಸ್ತೆ ಬೇಕೆಂದರೆ ಸಹಾಯ ಮಾಡಬಹುದು. ತಮ್ಮ ಮಾರ್ಕೆಟಿಂಗ್ ಕಮಿಟಿಯಿಂದ ಸಹಾಯ ಮಾಡಿ ರೋಡ್ ಫಾರ್ಮೇಷನ್ ಮಾಡುವುದಕ್ಕೆ ಏಕೆ ತಾವು ಹಣವನ್ನು ಕೊಡಬಾರದು ? ಕೋಟ್ಯಾಂತರ ರೂಪಾಯಿಗಳು ಬಿದ್ದಿವೆ. ಇವತ್ತು ಚೇರ್ಮನ್‌ಗಳು, ಅವರೂ ಇವರೂ ಮಜಾ ಮಾಡುತ್ತಿದ್ದಾರೆ. ರೈತರಿಗೆ ಮಾತ್ರ ಸಹಾಯ ಮಾಡುತ್ತಿಲ್ಲ. ಒಂದು ಕಡೆ ಅಗ್ರಿಕಲ್ಚರಲ್ ಯೂನಿವರ್ಸಿಟಿಗಳಿಗೆ ಸಹಾಯ ಮಾಡುತ್ತೇವೆಂದು ಹೇಳುತ್ತೀರಿ. ಆದರೆ ಇದನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಇದರ ವಿಸ್ತರಣೆ ಹೆಚ್ಚಿಗೆ ಮಾಡಿ, ಸ್ಕೋಪನ್ನು ಹೆಚ್ಚಿಗೆ ಮಾಡಬೇಕು. ವೆಟರ್ನರಿ ಹಾಸ್ಪಿಟಲ್ ಮಂತ್ತು ರೋಡ್‌ಗಳ ಬಗ್ಗೆ ಅನುಕೂಲ ಮಾಡುವ ರೀತಿಯಲ್ಲಿ ಏಕೆ ಮಾಡಬಾರದು ಎಂದು ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಇದು ಒಳ್ಳೆಯ ಅಮೆಂಡ್‌ಮೆಂಟ್ ಇದ್ದರೂ ಕೂಡ ಇದು ಬಹಳ ಸೀಮಿತವಾಗಿದೆ. ಎಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿ ಇದೆ ಅಲ್ಲಿ ಮಾತ್ರ ಅನುಕೂಲವಾಗುತ್ತದೆ, ಧಾರವಾಡ ಮತ್ತು ಬೆಂಗಳೂರುಗಳಲ್ಲಿ ಇದು ಅನುಕೂಲವಾಗುತ್ತದೆ. ಆದರೆ ಗುಲ್ಬರ್ಗಾ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಯೂನಿವರ್ಸಿಟಿಗಳು ಇಲ್ಲ ಆದುದರಿಂದ ದಯಮಾಡಿ ಇದರ ಬಗ್ಗೆ ಆಸಕ್ತಿ ವಹಿಸಿ, ಒಂದು ತಿದ್ದುಪಡಿಯನ್ನು ತನ್ನಿ, ನಾವು ಒಪ್ಪುತ್ತೇವೆ ತಾವು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ನಾವು ಮೇಜರ್ ಅಮೆಂಡ್‌ಮೆಂಟೇನೂ ಕೊಟ್ಟಿಲ್ಲ. ಮುನ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ. "With prior approval of the State Government to donate funds to any Agricultural University to impart instructions to agricultural engineering and research". ಎಂದಿರುವುದಕ್ಕೆ, 'Agricultural Sciences and Research' ಎಂದು ಕೊಟ್ಟಿದ್ದೇವೆ. ಇದನ್ನು ಳ ಜನ ಸೇರಿ ಕೊಟ್ಟಿದ್ದೇವೆ. ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಅಂಡ್ ರೀಸರ್ಚ್ ಜೊತೆಗೆ "ಅಗ್ರಿಕಲ್ಚರಲ್ ಸೈನ್ಸ್ ಅಂಡ್ ರೀಸರ್ಚ್" ಎಂದು ಕೇಳಿದ್ದೇವೆ. ಆಗ ಹಾರ್ಟಿಕಲ್ಚರ್, ಪೌಲ್ಟ್ರಿಫಾರ್ಮಿಂಗ್, ವೆಟರ್ನರಿ, ಡೈರಿ ಸರ್ವಿಸಸ್ ಇವುಗಳೆಲ್ಲಾ ಅಪ್ಲೈ ಆಗುತ್ತದೆ. ಇಂಜಿನಿಯರಿಂಗ್ ಎಂದು ಕೊಟ್ಟಿದ್ದಾರೆ, ಇದನ್ನು ಯಾರೋ ಇಂಜಿನಿಯರ್ಸ್ ಡ್ರಾಫ್ಟ್ ಮಾತಾರಬೇಕು. ಅವರು ಸ್ವಲ್ಪ ಲಾಭ ಪಡೆಯೋಣ ಎಂದು ಮಾಡಿರಬೇಕು. ಇದು ಸ್ವಲ್ಪ ವೈಡ್ ಪರ್ಸ್‌ಪೆಕ್ಟಿವ್ ಇರಲಿ. ವೆಟರ್ನರಿ, ಫಿಷರೀಸ್, ಪೌಲ್ಟ್ರಿಫಾರ್ಮಿಂಗ್ ಬರಲಿ. ರೈತರಿಗೆ ಯಾವುದು ಅನುಕೂಲವಾಗುತ್ತದೆ ಅವು ಇದರಲ್ಲಿ ಬರಲಿ. ಆದುದರಿಂದ ಇದನ್ನು 'ಅಗ್ರಿಕಲ್ಚರಲ್ ಸೈನ್ಸ್ ಅಂಡ್ ರೀಸರ್ಚ್' ಎಂದು ಮಾಡಬೇಕು. ಸ್ಕೋಪ್ ಸ್ವಲ್ಪ ದೊಡ್ಡದು ಮಾಡಿದರೆ ಇದರಿಂದ ಅನುಕೂಲವಾಗುತ್ತದೆ. ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಜೊತೆಗೆ ಅಗ್ರಿಕಲ್ಚರಲ್ ರೀಸರ್ಚ್ ಅಂಡ್ ಸೈನ್ಸ್ ಎಂದು ಮಾಡಿದರೆ, You can give a broad form which will include all the branches of

agriculture. ಅದಕ್ಕೋಸ್ಕರ ಇದನ್ನು ಒಪ್ಪಿಕೊಳ್ಳಬೇಕು ಕೆಲವೊಂದು ದೊಡ್ಡ ಮಾರ್ಕೆಟ್ ಯಾರ್ಡ್‌ಗಳು ಉಂಟು. ರೈತರಿಗೆ ಏನಾದರೂ ಸಹಾಯ ಮಾಡುವುದಕ್ಕೆ, ವಿಲೇಜ್ ಕಮ್ಯೂನಿಕೇಷನ್‌ಗೆ ಏನಾದರೂ ಸಹಾಯ ಮಾಡುವುದಕ್ಕೆ, ರಸ್ತೆ ಫಾರ್ಮೇಷನ್ ಮಾಡುವುದಕ್ಕೆ ಅನುಕೂಲ ಮಾಡಬೇಕು. ಇದನ್ನು ಕೂಡ ಮಾಡಲಿ. ಆದುದರಿಂದ ನಾವು ಕೊಟ್ಟಿರುವ ಅಮೆಂಡ್‌ಮೆಂಟ್ ಒಪ್ಪಿಕೊಳ್ಳುತ್ತೀರೆಂದು ನಂಬಿದ್ದೇನೆ.

† ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ).—ಎ ಪಿ. ಎಂ. ಸಿ. ಬಗ್ಗೆ ತಂದಿರತಕ್ಕ ಅಮೆಂಡ್‌ಮೆಂಟ್‌ನ್ನು ಒಪ್ಪಿಕೊಳ್ಳುತ್ತಾ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾವು ಅಗ್ರಿಕಲ್ಚರಲ್ ಇಂಜಿನಿಯರಿಂಗ್ ರೀಸರ್ಚ್‌ಗೆ ಮಾತ್ರ ಅನುಕೂಲ ಆಗಬೇಕು ಅವರು ಡೊನೇಷನ್ ಕೊಡುವುದಕ್ಕೆ ಅನುಕೂಲ ಆಗಬೇಕು ಎಂದು ತಂದರೂ ಸಹ ಸರ್ಕಾರದ ಮನಸ್ಸಿನಲ್ಲಿ ಇರತಕ್ಕ ಕೋಟ್ಯಾಂತರ ಹಣವನ್ನು ಯಾವ ರೀತಿ ಖರ್ಚು ಮಾಡಬೇಕೆಂಬ ಯೋಚನೆ ಇದೆಯೋ ಎಂಬ ಅನುಮಾನ ಬಂದಿದೆ. ರೈತ ಕೊಟ್ಟಂಥ ತೆರಿಗೆ ಹಣದಿಂದ ಈ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಹಣ ಇದೆ. ಸೌತ್ ಕೆನರಾದಲ್ಲಿ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಯವರು ಕೋಟ್ಯಾಂತರ ರೂಪಾಯಿಗಳನ್ನು ಕಟ್ಟಡಕ್ಕೆಂದು ಇಟ್ಟುಕೊಂಡಿದ್ದರು. ಇದನ್ನು ಸರ್ಕಾರದವರು ಟ್ರಜರಿಯಲ್ಲಿ ಇಡಬೇಕೆಂದು ಹೇಳಿ, ಈ ಹಣವನ್ನು ಬೇರೆ ಕಡೆ ಇಡಿಸಿ, ಸಾಲ ತೆಗೆದು ಕೊಂಡಿರತಕ್ಕಂಥ ಅನೇಕ ನಿದರ್ಶನಗಳು ಉಂಟು. ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಇರತಕ್ಕ ಹಣ, ಆಲ್ಲಿರತಕ್ಕ ರೈತರ ಅನುಕೂಲಕ್ಕೆ ಖರ್ಚು ಮಾಡುವ ವ್ಯವಸ್ಥೆ ಇಲ್ಲ. ಶಿಕಾರಿಪುರದಲ್ಲಿ ಇದು ಪ್ರಾರಂಭವಾಗಿ ೧೦–೧೨ ವರ್ಷ ಆಯಿತು. ಇವತ್ತೂ ಆಲ್ಲಿನ ರೈತರಿಗೆ ಅನುಕೂಲವಾಗುತ್ತಿಲ್ಲ. ಅಲ್ಲಿ ಕಟ್ಟಡವನ್ನು ಕಟ್ಟಿದ್ದೇವೆ, ಹೊನ್ನಾಳಿಯಲ್ಲಿ ಕಟ್ಟಡ ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಎಲ್ಲಿ ಅಗತ್ಯ ಇದೆ ಅಲ್ಲಿ ಹಣ ಇಲ್ಲ.

ಎಲ್ಲಿ ಅಗತ್ಯ ಇಲ್ಲ, ಅಲ್ಲಿ ಹೋಗಿ ಹಣ ಇನ್‌ವೆಸ್ಟ್ ಮಾಡಿ, ವರ್ಲ್ಡ್ ಬ್ಯಾಂಕ್‌ನಿಂದ ದುಡ್ಡು ಬರುತ್ತದೆ ಎಂದು, ಖರ್ಚು ಮಾಡಿ, ಎಲ್ಲಾ ಹಾಳುಬಿದ್ದು ಹೋಗುತ್ತಿದೆ. ಇದರ ಅಭಿವೃದ್ಧಿ ಬಗ್ಗೆ ಕಳೆದ ಹತ್ತಾರು ವರ್ಷಗಳ ಕಾಲದಿಂದ ಇಲಾಖೆಯವರು ಚಿಂತನೆ ಮಾಡತಕ್ಕದ್ದು ಇಲ್ಲ. ಇದು ತಪ್ಪಬೇಕು. ಇದು ಆಗದಿರುವ ರೀತಿಯಲ್ಲಿ ನೋಡಿಕೊಳ್ಳಬೇಕು. ಅಗ್ರಿಕಲ್ಚರಲ್ ಎಂಜಿನಿಯರಿಂಗ್ ರೀಸರ್ಚ್‌ಗೆ ಹಣ ಬೇಕೆಂದು ನಾವು ಡೊನೇಷನ್ ಕೇಳುತ್ತಿದ್ದೀರಿ. ಡೊನೇಷನ್ ಕೊಡಲಿ ಎಂಬ ದೃಷ್ಟಿಯಿಂದ ಅಮೆಂಡ್‌ಮೆಂಟ್ ತರುತ್ತಿದ್ದೀರಿ. ಈ ರಾಜ್ಯದ ರೈತರ ಬಗ್ಗೆ ತಮಗೆ ಕಳಕಳಿ ಇದ್ದರೆ ಅಲ್ಲಿರುವಂತಹ ದುಡ್ಡನ್ನು ವೆಟರ್ನರಿ ದೃಷ್ಟಿಯಿಂದ ಖರ್ಚು ಮಾಡುವಂತೆ ನೋಡಿಕೊಳ್ಳಬೇಕು. ಜಾನುವಾರುಗಳಿಗೆ ರೋಗ ಬಂದಾಗ ಹಾಗೂ ಇನ್ನೂ ಬೇರೆ ಬೇರೆ ಕಾರಣಗಳಿಗೆ ವೆಟರ್ನರಿ ಹಾಸ್ಪಿಟಲ್‌ಗಳಲ್ಲಿ ಔಷಧ ಕೊಡುವುದಕ್ಕೆ ಇರುವುದಿಲ್ಲ. ಆದುದರಿಂದ ಈ ಔಷಧಗಳನ್ನು ಕೊಂಡುಕೊಡುವಂತಹ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಇದನ್ನು ಖರ್ಚು ಮಾಡಬೇಕು. ಇವತ್ತು ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಲ್ಲಿ ಜಾನುವಾರುಗಳಿಗೆ ಕಾಲುಬಾಯಿ ರೋಗ ಬಂದಿದೆ. ಹಾಸ್ಪಿಟಲ್‌ಗಳಲ್ಲಿ ಯಾವುದೇ ರೀತಿಯ ಔಷಧಗಳು ಇಲ್ಲ.ಅದನ್ನು ಪ್ರಿಸರ್ವ್ ಮಾಡಿ ಒಂದು ಕಡೆ ಇಡುವುದಕ್ಕೆ ವ್ಯವಸ್ಥೆ ಇಲ್ಲ. ಯಾರು ರೈತ ಇದ್ದಾನೆ ಅವನು ಕೊಟ್ಟಂಥ ದುಡ್ಡು. ಅವನು ಕೊಟ್ಟಂತಹ ತೆರಿಗೆ ಹಣವನ್ನು ಆ ರೈತನ ಜಾನುವಾರುಗಳಿಗೆ ರೈತನಿಗೆ ಅನುಕೂಲಕ್ಕೆ ಖರ್ಚು ಮಾಡತಕ್ಕಂಥ ವಿಚಾರ ಇಲ್ಲದಿರುವಂತಹ ನಿರ್ದಿಷ್ಟ ಉದ್ದೇಶ ಏನು? ನಿಜವಾಗಿಯೂ ದುಡ್ಡನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಉದ್ದೇಶ ಇದೆಯೋ, ಅಥವಾ ಕೋಟಿಗಟ್ಟಲೆ ಹಣವನ್ನು ತೆಗೆದುಕೊಂಡು ಬಂದು ಬೇರೆಯದಕ್ಕೆ ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರೋ ಎನ್ನುವ ಭಯ ಇದೆ. ದಯವಿಟ್ಟು ಅಗ್ರಿಕಲ್ಚರಲ್‌ಗೆ ಅನುಕೂಲ ಆಗದಿರುವಂತಹದಕ್ಕೆ ಈ ಸಮಿತಿಗಳಲ್ಲಿರುವ ದುಡ್ಡನ್ನು ತೆಗೆದುಕೊಳ್ಳಬೇಡಿ. ಯಾವುಯಾವುದಕ್ಕೋ ಖರ್ಚು ಮಾಡಲು ಈ ದುಡ್ಡನ್ನು ತೆಗೆದುಕೊಳ್ಳುವ ಪ್ರಯತ್ನವನ್ನು ಸರಕಾರ ಮೊದಲನೆಯ ಸಲ ಮಾಡುತ್ತಿದೆ, ಇದು ಖಂಡನಾರ್ಹವಾದುದು. ಈ ಪ್ರಯತ್ನವನ್ನು ಮಾಡಬಾರದು. ಆಲ್ಲಿರುವಂತಹ ದುಡ್ಡು ಆಲ್ಲೇ ಇರಲಿ ಸೌತ್ ಕೆನರಾದಲ್ಲಿರುವ ದುಡ್ಡು, ಶಿವಮೊಗ್ಗದಲ್ಲಿರುವ ದುಡ್ಡು ಮತ್ತೊಂದು ಕಡೆ ಇರುವ ದುಡ್ಡು ಅಲ್ಲೇ ಇರಲಿ, ಅದರಿಂದ ರೈತರಿಗೆ ಅನುಕೂಲತೆ ಆಗಬೇಕು. ಈ ತಿದ್ದುಪಡಿಯಲ್ಲಿ ಆ ವಿಚಾರ ಮಾಡಿಲ್ಲ. ಆ ದುಡ್ಡನ್ನು ರೈತಾಪಿ ಜನಗಳಿಗೆ ಅನುಕೂಲ ಆಗತಕ್ಕಂಥ ಕೆಲಸಗಳಿಗೆ, ಜಾನುವಾರುಗಳಿಗೆ ಔಷಧ ಕೊಂಡುಕೊಳ್ಳುವುದಕ್ಕೆ, ಹಾಗೂ ಅಗತ್ಯ ಇರುವ ಇತರ ಕೆಲಸಕಾರ್ಯಗಳಿಗೆ

ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವಂತಹ ಪ್ರಯತ್ನ ಸಹ ಮಾಡಬೇಕು. ಈ ತರಹ ಒಂದು ಅಮೆಂಡ್‌ಮೆಂಟ್ ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು ಅಮೆಂಡ್‌ಮೆಂಟ್ ಏನು ತಾವು ತರುತ್ತಿದ್ದೀರಿ ಇದು ಅಗತ್ಯವಾಗಿದೆ. ನಮ್ಮ ನಾಲ್ಕು ಜನ ಮಾನ್ಯ ಸ್ನೇಹಿತರು ಇದರಲ್ಲಿ ಕೆಲವು ವರ್ಡ್ಸ್ ಬದಲಾವಣೆಯಾಗಬೇಕೆಂದು ಹೇಳಿದರು ಅಗ್ರಿಕಲ್ಚರಲ್ ಎಂಜಿನಿಯರಿಂಗ್ ರೀಸರ್ಚ್ ಎಂದು ಏನು ಇದೆ, ಅದ ಅಗ್ರಿಕಲ್ಚರಲ್ ಸೈನ್ಸಸ್ ಆಂಡ್ ರಿಸರ್ಚ್ ಎಂದಾಗಬೇಕೆಂದು ಹೇಳಿದರು. ಆಗತ್ಯ ಇರತಕ್ಕಂಥ ಬದಲಾವಣೆ ಮಾಡಿ ಇದನ್ನು ಹೊಂದಿಸಿಕೊಂಡು ಈ ಬಿಲ್‌ನ್ನು ಪಾಸ್ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ನಾನು ದೊಡ್ಡ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ತಿಳಿದ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಮಾನ್ಯ ಪಂಚಪ್ಪನವರು ನನ್ನ ಸ್ನೇಹಿತರು ಈಗ ಮಂತ್ರಿಗಳಾಗಿದ್ದಾರೆ, ಅವರ ಹೇಳಿಕೆಗಳನ್ನು ನಾನು ನೋಡಿದ್ದೇನೆ. ಹೊಸದಾಗಿ ಮಂತ್ರಿಗಳಾಗಿದ್ದಾರೆ, ಅವರು ಏನೇನು ಹೇಳಿಕೆ ಕೊಡುತ್ತಾರೆ, ಏನೇನು ಬದಲಾವಣೆಗಳನ್ನು ಅವರ ಇಲಾಖೆಯಲ್ಲಿ ಮಾಡುತ್ತಾರೆ ಎಂದು ನಾನು ನೋಡುತ್ತಿದ್ದೇನೆ. ಇವನ್ನು ತಂದಿರುವುದನ್ನು ನೋಡಿದರೆ ರೈತರಿಗೆ ಏನೇನು ಸಹಾಯ ಮಾಡಬೇಕೆಂದು ಅವರು ಹೇಳಿದ್ದರು ಅದೊಂದೂ ಇಲ್ಲಿ ಬಂದಿಲ್ಲ. ಅವರು ಒಂದು ಡೊನೇಷನ್ ಕೊಡುತ್ತಾರೆ ಎಂದು ಒಂದು ಪಕ್ಷ ಇಟ್ಟುಕೊಳ್ಳೋಣ. ಮಾರ್ಕೆಟ್ ಸೊಸೈಟಿಯವರು ಬಹಳ ವರ್ಷಗಳಿಂದ ಸೆಸ್ ಮತ್ತು ಫೀಸನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಬಹಳ ವರ್ಷಗಳಿಂದ ಇದು ಹಾಗೆಯೇ ಇದೆ. ಅದೆಷ್ಟು ಹಣ ಇದೆ, ಎಲ್ಲಿದೆ, ನಿಜವಾಗಿಯೂ ಹಣ ಇದ್ದರೆ ಅದು ಎಲ್ಲಿದೆ ಎಷ್ಟು ಇದೆ ? ಯಾವ ರೂಪದಲ್ಲಿ ಇದನ್ನು ಖರ್ಚು ಮಾಡುತ್ತಾರೆ ಎಂಬುದನ್ನು ಹೇಳಬೇಕು. ಮಾನ್ಯ ಖರ್ಗೆಯವರು ಮಾನ್ಯ ಪಾಟೀಲರು ಹೇಳಿದ್ದರೆ, ಅವರು ಒಂದು ಅಮೆಂಡ್‌ಮೆಂಟ್ ಕೂಡಾ ತಂದಿದ್ದಾರೆ. ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಈ ಹಣ ಎಷ್ಟಿದೆ, ಎಲ್ಲಿದೆ ಎನ್ನುವುದರ ವಿವರ ಬೇಕೇ ಬೇಕು. ಮುಂದೆ ವಸೂಲು ಮಾಡತಕ್ಕಂಥ ಸೆಸ್, ಫೀಸ್ ಇದರಲ್ಲಿ ಹಣವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ ಅಥವಾ ಇರುವ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ? ಹಾಗಿದ್ದರೆ ಎಷ್ಟು ಹಣ ಈಗಿದೆ. ವಸೂಲು ಮಾಡುವ ಹಣ ಎಷ್ಟು ಬರುತ್ತದೆ, ಎಷ್ಟು ನಿರೀಕ್ಷೆ ಮಾಡಿದ್ದೀರಿ, ಇದನ್ನು ಸ್ವಲ್ಪ ವಿವರವಾಗಿ ಕೊಟ್ಟರೆ ಸಂತೋಷವಾಗುತ್ತದೆ.

ಶ್ರೀ ಯು. ಭೂಪತಿ (ಸಂಡೂರು) —ಮಾನ್ಯ ಅಧ್ಯಕ್ಷರೇ, ಎ.ಪಿ.ಎಂ.ಸಿ. ಆಕ್ಟ್‌ನಲ್ಲಿ ಸೆಕ್ಷನ್ ೬೩ಕ್ಕೆ ಅಮೆಂಡ್‌ಮೆಂಟ್ ತೆಗೆದುಕೊಂಡು ಬರುತ್ತಿದ್ದಾರೆ ಮಾನ್ಯ ಬಸವಲಿಂಗಪ್ಪನವರು ಹೇಳಿದ ಅಂಶ ಸರಿಯಾದುದು. ಎಷ್ಟು ಹಣ ಇದೆ ಎಂಬುದರ ಬಗ್ಗೆ ಹೇಳಿದರೆ ಅದರ ಅಂದಾಜು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಾಗುತ್ತದೆ. ಇನ್ನೊಂದು ಬಹಳ ಮುಖ್ಯವಾಗಿ ಗಮನಿಸಬೇಕಾದುದು, ಒಂದು ಸಾರಿ ಯಾವುದೇ ಒಂದು ಸಂಸ್ಥೆ ಇನ್ನೊಂದು ಸಂಸ್ಥೆಗೆ ಹಣವನ್ನು ಕೊಡುವುದಕ್ಕೆ ಪ್ರಾವಿಜನ್ ಮಾಡಿ ಇಲ್ಲಿ ತಿದ್ದುಪಡಿ ತಂದಿರುವಾಗ, ಮೂಲಭೂತವಾಗಿ ಯಾವ ಸಂಸ್ಥೆ ಹಣ ಅಥವಾ ಧನ ಸಹಾಯ ಮಾಡಬೇಕೆಂದು ನಾವು ಹೇಳುತ್ತೇವೆ, ಆ ಸಂಸ್ಥೆ ಎಷ್ಟರಮಟ್ಟಿಗೆ ಹಣವನ್ನು ವಸೂಲು ಮಾಡುತ್ತಿದೆ, ಅದರಲ್ಲಿ ಪ್ರಾಮಾಣಿಕತೆ ಇದೆಯೇ ಇದು ಬಹಳ ಮುಖ್ಯ.

೩–೦೦ ಪಿ. ಎಂ.

ಮಾನ್ಯ ಮಂತ್ರಿಗಳು ಈಗ ಎ.ಪಿ.ಎಂ.ಸಿ. ಗೆ ಮಂತ್ರಿಗಳಾಗಿದ್ದಾರೆ. ಅವರು ಅನೇಕ ಕಡೆಗಳಲ್ಲಿ ಪ್ರವಾಸ ಮಾಡಿದ್ದಾರೆ ಅವರ ಪ್ರವಾಸ ಕಾಲದ ಪತ್ರಿಕಾ ಹೇಳಿಕೆಗಳನ್ನು ನಾನು ನೋಡಿ ಓದಿದ್ದೇನೆ. ಎ.ಪಿ.ಎಂ.ಸಿ. ಗಳಲ್ಲಿ ರೈತರಿಂದ ಕಮಿಷನ್ ವಸೂಲಿ ಮಾಡಬಾರದು ಎಂದು ಹೇಳಿದ್ದಾರೆ. ಆದರೆ ನಾನು ಈ ಬಗ್ಗೆ ಹಿಂದೆ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ಜಾಲಪ್ಪನವರಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ ಅವರು ಈ ಬಗ್ಗೆ ಒಂದು ತಿದ್ದುಪಡಿಯನ್ನು ಸಹ ತಂದಿದ್ದರು. ಅವರು ತಿದ್ದುಪಡಿ ತಂದಾಗ ಮತ್ತು ಈಗಲೂ ಸಹ ಎ.ಪಿ.ಎಂ.ಸಿ ಗಳಲ್ಲಿ ರೈತರಿಂದ ಕಮಿಷನ್ ವಸೂಲಿ ಮಾಡುತ್ತಿರುವಂತಹ ಉದಾಹರಣೆಗಳಿವೆ. ಆಗ ಮಾನ್ಯ ಜಾಲಪ್ಪನವರು ಒಪ್ಪಿಕೊಂಡಿದ್ದರು. ಮತ್ತು ಈ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಸಹ ಹೇಳಿದ್ದರು, ಅವರು ಏನು ಕ್ರಮ ತೆಗೆದುಕೊಂಡರೋ ಗೊತ್ತಾಗಲಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ರೈತರ ಅನುಕೂಲ

ಕ್ಯಾಗಿ ಎ.ಪಿ.ಎಂ.ಸಿ. ಗಳು ಕೆಲಸ ಮಾಡಬೇಕಾಗುತ್ತದೆ. ಖರೀದಿದಾರರಿಂದ ಏನೊಂದು ಕಮಿಷನ್ ಪಡೆಯಬೇಕಾಗುತ್ತದೆಯೋ ಅದು ಬಿಟ್ಟು ಖರೀದಿದಾರರಿಂದ ಪಡೆದುಕೊಂಡ ಕಮಿಷನ್ ಬಗ್ಗೆ ಸರಿಯಾಗಿ ರಸೀದಿಯನ್ನು ಹಾಕುವುದಿಲ್ಲ. ಇನ್ನು ರೈತರಿಂದ ಪಡೆದುಕೊಂಡ ಕಮಿಷನ್ ಬಗ್ಗೆ ರಸೀದಿ ಪ್ರಶ್ನೆ ಎಲ್ಲಿ ಬಂತು ? ಅವರು ಒಂದು ಬಿಳಿ ಹಾಳೆಯ ಮೇಲೆ ಬರೆದು ಕೊಡುತ್ತಾರೆ. ಅದೂ ಕಮಿಷನ್ ಎಂದು ಬರೆದು ಕೊಡುವುದಿಲ್ಲ, ಖರ್ಚಿಗಾಗಿ ೫೦ ರೂಪಾಯಿಗಳು ಎಂದು ಬರೆದಿರುತ್ತಾರೆ. ಅದನ್ನು ರೈತ ತೆಗೆದುಕೊಂಡು ನೋಡಿ ಸುಮ್ಮನೆ ಹೋಗುತ್ತಾನೆ. ಈ ರೀತಿ ಲಕ್ಷಾಂತರ ರೂಪಾಯಿಗಳನ್ನು ಎ.ಪಿ.ಎಂ.ಸಿ. ಗಳಲ್ಲಿ ಕೆಲವರ ಜೇಬಿಗೆ ಹೋಗುತ್ತಿದೆ. ಈ ಬಗ್ಗೆ ತಾವೇನು ಕ್ರಮ ಕೈಗೊಂಡಿದ್ದೀರಿ? ಇದರಿಂದ ಸರ್ಕಾರಕ್ಕೆ ಬರಬೇಕಾದಂತಹ ನೂರಕ್ಕೆ ನೂರರಷ್ಟು ಆದಾಯ ಸಹ ಸೋರಿ ಹೋಗುತ್ತಿದೆ. ಈ ರೀತಿಯಾದರೆ ನೀವು ಎಲ್ಲಿಂದ ಧನಸಹಾಯ ಮಾಡುತ್ತೀರಿ ? ಮೂಲಭೂತವಾಗಿ ವಸೂಲಿ ಮಾಡಬೇಕಾದ ಹಣವನ್ನು ಸಹ ವಸೂಲಿ ಮಾಡುತ್ತಿಲ್ಲ. ಈ ಹಣ ಖಾಸಗಿಯಾಗಿ ವಸೂಲಿ ಮಾಡಿಕೊಂಡು ಅವರ ಜೇಬಿಗೆ ಸೇರಿಸಿಕೊಳ್ಳುತ್ತಿದ್ದಾರೆ. ಈ ರೀತಿಯಾದರೆ ಧನಸಹಾಯದ ಪ್ರಶ್ನೆಯೇ ಬರುವುದಿಲ್ಲ. ಮೂಲಭೂತವಾಗಿ ಈ ಎ.ಪಿ.ಎಂ.ಸಿ. ಗಳಲ್ಲಿರತಕ್ಕಂಥ ಹೆಗ್ಗಣಗಳನ್ನು ಹಿಡಿದಂ ಸೆದೆ ಬಡಿಯಬೇಕು. ಅದುವರೆವಿಗೂ ತಾವೇನೇ ಮಾಡಿದರೂ ಉದ್ಧಾರವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ವಸೂಲಾತಿ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಸಭೆಯ ಮುಂದಿರತಕ್ಕ ವಿಷಯ ಮಾರ್ಕೆಟಿಂಗ್ ಕಮಿಟಿಯವರು ವಸೂಲು ಮಾಡತಕ್ಕಂಥ ಮಾರ್ಕೆಟ್ ಫೀ ಮತ್ತು ಇತರೇ ವಸೂಲಾತಿಗಳಿಂದ ಬರತಕ್ಕಂಥ ಒಟ್ಟು ಆದಾಯ. ಈ ಹಣದಿಂದ ವ್ಯವಸಾಯ ಉತ್ಪಾದನೆಗೆ ಜಾಸ್ತಿ ಸಹಾಯ ಮಾಡಲು ಆ ಬಗ್ಗೆ ನಾವು ಈಗ ತಂದಿರತಕ್ಕಂಥ ತಿದ್ದುಪಡಿ. ಆದರೆ ಆ ಪ್ರಶ್ನೆ ಬಂದಾಗ ಮಾನ್ಯ ಸದಸ್ಯರು ಮಾತನಾಡಿದರೆ ಒಳ್ಳೆಯದು. ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಯಂ. ಭೂಪತಿ.—ನಾನು ಅದನ್ನು ತಿಳಿದುಕೊಂಡೇ ಮಾತನಾಡುತ್ತಿದ್ದೇನೆ. ಈಗ ನಮ್ಮ ಎ.ಪಿ.ಎಂ.ಸಿ. ಗಳ ವ್ಯಾಪಾರದ ವಹಿವಾಟಿನಿಂದ ಬರತಕ್ಕಂಥ ಆದಾಯದಿಂದ ಧನಸಹಾಯ ಮಾಡುತ್ತೀರಿ. ಆದಾಯವೇ ಇಲ್ಲದಿದ್ದರೆ ಧನಸಹಾಯದ ಪ್ರಶ್ನೆ ಎಲ್ಲಿ ಬರುತ್ತದೆ ? ನಾವು ಸೋರಿ ಹೋಗ ತಕ್ಕಂಥಾದ್ದನ್ನು ತಡೆಗಟ್ಟಬೇಕು. ನೀವು ತಂದಿರುವ ಉದ್ದೇಶ ಸರಿ ಇದೆ. ಅದನ್ನು ನಾನು ವಿರೋಧ ಮಾಡುತ್ತಿಲ್ಲ. ರೀಸರ್ಚ್ ಕೆಲಸಕ್ಕೆ ಧನಸಹಾಯ ಮಾಡಬೇಕು. ಆದರೆ ಇಲ್ಲಿ ಸಹಾಯ ಮಾಡುವುದಕ್ಕೆ ಆಗುವುದಿಲ್ಲ ನಾನು ವಿಷಯ ಬಿಟ್ಟು ಮಾತನಾಡುತ್ತಿಲ್ಲ. ಸರ್ಕಾರ ಎಷ್ಟೋ ತಿದ್ದುಪಡಿಗಳನ್ನು ಜಾರಿಗೆ ತಂದಿದೆ. ಆದರೆ ಆ ತಿದ್ದುಪಡಿಗಳು ಕಾರ್ಯರೂಪಕ್ಕೆ ಬಂದಿಲ್ಲ ಒಂದು ಕಾನೂನನ್ನು ಜಾರಿಗೆ ತಂದ ಮೇಲೆ ಆ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಿಲ್ಲವೆಂದರೆ ಆಗ ಆ ಕಾನೂನಿಗೆ ಒಂದು ಅರ್ಥ ಬಂದಂತೆ ಆಗಲಿಲ್ಲ. ನಿಮ್ಮ ಉದ್ದೇಶ ಒಳ್ಳೆಯದು ಇರಬಹುದು. ಅದನ್ನು ನಾನು ವಿರೋಧ ಮಾಡುತ್ತಿಲ್ಲ. ನಿಮ್ಮ ಉದ್ದೇಶ ಸರಿಯಾಗಿದೆ. ಆದ್ದರಿಂದ ನಾನು ಇದನ್ನು ಸ್ವಾಗತ ಮಾಡಿ ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ ನಾನೂ ಈ ತಿದ್ದುಪಡಿಯನ್ನು ವಿರೋಧ ಮಾಡುತ್ತೇನೆ ಈಗ ವಿಶ್ವವಿದ್ಯಾನಿಲಯಗಳಿಗೆ ಅವುಗಳದೇ ಆದ ಕೆಲಸ ಇದೆ. ಅವುಗಳಿಗೆ ಇರತಕ್ಕಂಥ ಗ್ಯಾರಂಟಿನನ್ನು ಸರ್ಕಾರ ಕಾನೂನು ಪ್ರಕಾರ ಕೊಡುತ್ತದೆ. ವ್ಯವಸಾಯ ಉತ್ಪನ್ನಗಳ ಮಾರುಕಟ್ಟೆಗಳಿಗೆ ತನ್ನದೆ ಆದ ಒಂದು ಕೆಲಸ ಇದೆ. ಅದಕ್ಕೆ ಒಂದು ಕಾನೂನು ಇದೆ. ಆ ಪ್ರಕಾರ ನಾವು ಜವಾಬ್ದಾರಿಯನ್ನು ಅವರಿಗೆ ವಹಿಸಿದ್ದೇವೆ. ರೈತರನ್ನು ರಕ್ಷಣೆ ಮಾಡುವ ಸಲುವಾಗಿ ಬೇಕಾದಷ್ಟು ಕಾನೂನುಗಳನ್ನು ಮಾಡಿ ಅವಕಾಶ ಮಾಡಿಕೊಟ್ಟಿದ್ದೇವೆ ಕಾನೂನುಗಳನ್ನು ಮಾಡುವಂತಹ ಸಂದರ್ಭದಲ್ಲಿ ಸಮಿತಿಗಳಿಗೆ ಬರತಕ್ಕಂಥ ಹಣದಲ್ಲಿ ಏನಾದರೂ ಮಾಡಿದರೆ ಮತ್ತೆ ಆ ಸಮಿತಿಗಳು ಅಡಿ ಮಾಡದೆ ಇರುವುದಿಲ್ಲ.

ಆನಂತರ ಅದಕ್ಕೆ ಪರಿಮಿತಿ ಇರುವುದಿಲ್ಲ, ಎಲ್ಲಾ ದುಡ್ಡು ಡೊನೇಷನ್‌ಗೆ ಹೊರಟು ಹೋಗುತ್ತದೆ. ಎನ್ನತಕ್ಕ ಭಾವನೆಯಿದ ಅಲ್ಲಿಗೆ ಯಾವುದೇ ರೀತಿಯಲ್ಲಿ ಡೊನೇಷನ್ ಕೊಡುವುದಕ್ಕೆ ಪ್ರಾವಿಷನ್ ಮಾಡಿಲ್ಲ, ಹಿಂದೆ ಹಲವಾರು ಬಾರಿ ಸರ್ಕಾರದ ವಂಂದೆ ಇಂಥ ಪ್ರಶ್ನೆಗಳು ಬಂದಾಗಲೂ ಕೂಡ ಸರ್ಕಾರ ಸತತವಾಗಿ, ಇದಕ್ಕೆ ಅವಕಾಶ ಕೊಡಬಾರದು ಎನ್ನತಕ್ಕ ತೀರ್ಮಾನವನ್ನೇ ಮಾಡಿಕೊಂಡು ಬಂದಿದೆ. ಇವೊತ್ತು ತಾವು ಅದನ್ನು ಬದಲಾವಣೆ ಮಾಡುತ್ತಿದ್ದೀರಿ. ಬದಲಾವಣೆ ಮಾಡುವುದಕ್ಕೆ

ಅಂಥ ಗಂಭೀರವಾದ ಕಾರಣಗಳು ಏನಿವೆ ಎಂಬುದೂ ನನಗೆ ಅರ್ಥವಾಗುತ್ತಿಲ್ಲ. ಅಗ್ರಿಕಲ್ಚರಲ್ ಇಂಜೀನಿಯರಿಂಗ್ ಮತ್ತು ಅಗ್ರಿಕಲ್ಚರಲ್ ರೀಸರ್ಚ್‌ಗೆ ಬೇಕಾಗುವಷ್ಟು ಹಣವನ್ನು ಕೊಡುವುದಕ್ಕೆ ಸರ್ಕಾರದಲ್ಲಿ ಹಣ ಇಲ್ಲವೆ ? ಯೂನಿವರ್ಸಿಟಿಗಳಿಗೆ ಹಣ ಕೊಡುವುದಕ್ಕೆ ಸರ್ಕಾರದ ಕೈಯಲ್ಲಿ ಆಗಲಿಲ್ಲ ಎಂದರೆ ಎ. ಪಿ. ಎಂ. ಸಿ. ಗಳಿಂದಲೇ ಯೂನಿವರ್ಸಿಟಿಗಳನ್ನು ನಡೆಸುತ್ತೀರಾ ? ಯೂನಿವರ್ಸಿಟಿಗಳನ್ನು ಎ. ಪಿ. ಎಂ. ಸಿ. ಗಳಿಗೇ ವಹಿಸಿಬಿಡಿ. ಇವಾದರೂ ಒಂದು ಕೆಲಸ ಆಗುತ್ತದೆ, ನೀವು ಎ.ಪಿ. ಎಂ. ಸಿ. ಗಳವರಿಂದ ಹಣವನ್ನು ಕೇಳಿ, ಆ ಹಣವನ್ನು ತೆಗೆದುಕೊಂಡು ರೀಸರ್ಚ್ ವಿಂಗ್ ಸ್ಟಾರ್ಟ್ ಮಾಡುವ ಬದಲು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿಗಳಿಗೇ ಯೂನಿವರ್ಸಿಟಿಗಳನ್ನು ವಹಿಸಿಬಿಡಿ. ನಮ್ಮ ಕೈಯಲ್ಲಿ ಯೂನಿವರ್ಸಿಟಿಗಳನ್ನು ನಡೆಸುವುದಕ್ಕೆ ಯೋಗ್ಯತೆ ಇಲ್ಲದಿದ್ದರೆ ಈ ರೀತಿ ಅವೆಂಡಾ ಪೌಂಟ್ ತಂದು ಹಣವನ್ನು ವಸೂಲಿ ಮಾಡಿಕೊಂಡು ಯೂನಿವರ್ಸಿಟಿಗಳನ್ನು ನಡೆಸುವುದು ಏಕೆ ಬೇಕು ? ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿಗಳಿಗಾದರೂ ಎಷ್ಟು ಜವಾಬ್ದಾರಿ ಇದೆ ? ರೈತರು ತಂದ ಮಾಲುಗಳನ್ನು ಹರಾಜು ಹಾಕುವುದು, ಅವರಿಂದ ಫೀಸ್ ವಸೂಲಿ ಮಾಡುವುದು ಇಷ್ಟೆ. ಅದರ ಕೆಲಸ. ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೇ ಈ ಮಾರ್ಕೆಟ್ ಕಮಿಟಿಗಳಲ್ಲಿ ಅನ್‌ಆಥರೈಸ್ಡ್ ಆಗಿ ಅನೇಕ ಅವ್ಯವಹಾರಗಳು ನಡೆಯುತ್ತಿವೆ. ಈ ಅವ್ಯವಹಾರಗಳನ್ನು ತಪ್ಪಿಸುವ ಶಕ್ತಿ ನಿಮಗಂತೂ ಇಲ್ಲ. ರೈತರಿಗೆ ಬೇಕಾದಂಥ ಕನಿಷ್ಟ ಸೌಲಭ್ಯಗಳೂ ಕೂಡ ಯಾವುದೇ ಮಾರ್ಕೆಟ್ ಕಮಿಟಿಯ ಆಶ್ರಯದಲ್ಲಿ ಇವೊತ್ತು ಸಿಕ್ಕುತ್ತಿಲ್ಲ. ಸುಮ್ಮನೆ ನೆಪ ಮಾತ್ರಕ್ಕೆ ಈ ಕಮಿಟಿಗಳು ಇವೆ. ಗಾಡಿ ಸ್ಟ್ಯಾಂಡ್ ಎಂದು ಬೋರ್ಡ್ ಹಾಕಿರುತ್ತಾರೆ, ಅಲ್ಲಿ ಗಾಡಿ ನಿಲ್ಲಿಸುವುದಕ್ಕೆ ಜಾಗವೇ ಇರುವುದಿಲ್ಲ. ಎತ್ತುಗಳಿಗೆ ಒಂದು ಹೊರೆ ಹುಲ್ಲು ಹಾಕುವುದಕ್ಕೆ ವ್ಯವಸ್ಥೆಯನ್ನು ಮಾಡಿಲ್ಲ. ರೈತರಿಗೆ ಮತ್ತು ಅಲ್ಲಿಗೆ ಬಂದವರಿಗೆ ಒಂದು ನೆರಳು ಕೊಡುವುದಕ್ಕೆ ಬೇಕಾದಂಥ ಕನಿಷ್ಟವಾದಂಥ ಒಂದು ವ್ಯವಸ್ಥೆಯೂ ಕೂಡ ಆಗಿಲ್ಲ. ರೈತರ ಹಿತ ರಕ್ಷಣೆ ಮಾಡುವುದಕ್ಕೆ ಮುಖ್ಯವಾಗಿ ಬೇಕಾಗಿರತಕ್ಕ ಒಂದು ವ್ಯವಸ್ಥೆಯೂ ಅಲ್ಲಿ ಇಲ್ಲ. ಇವತ್ತು ರೈತರಿಗೆ ಆಗುತ್ತಿರುವುದು ಏನು ? ರೈತ ಬೆಳೆದಿರತಕ್ಕಂಥ ಬೆಳೆಗೆ ಬೆಲೆ ಇದೆಯೇ ? ಜಗತ್ತಿನಲ್ಲಿ ಎಲ್ಲಾ ಕಡೆ ಬೆಲೆ ಇದೆ. ಆದರೆ, ಅದು ರೈತನಿಗೆ ಮಾತ್ರ ಸಿಗುತ್ತಿಲ್ಲ. ರೈತನು ತಾನು ಬೆಳೆದ ಮಾಲನ್ನು ಕೇಳಿದಷ್ಟಕ್ಕೆ ಮಾರಾಟ ಮಾಡಬೇಕು, ಅವನು ಕೊಳ್ಳಬೇಕಾದ ವಸ್ತುಗಳಿಗೆ ಹೇಳಿದಷ್ಟು ಬೆಲೆಯನ್ನು ಕೊಟ್ಟು ಕೊಂಡುಕೊಳ್ಳಬೇಕು. ರೈತನು ಇಬ್ಬಂದಿಯ ದುರವಸ್ಥೆಯಲ್ಲಿ ಇದ್ದಾನೆ. ರೈತನನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರದ ಪಾತ್ರ ಬಹಳ ಮುಖ್ಯವಾದುದು. ಶ್ರೀ ಕೆ. ಹೆಚ್. ಪಾಟೀಲರು ಹೇಳುವ ಹಾಗೆ ರೈತರುಗಳೇ ಕೋ—ಆಪರೇಟಿವ್ ಮಾಡಿಕೊಂಡು ಪ್ರೊಸೆಸಿಂಗ್ ಇಂಡಸ್ಟ್ರಿಗಳನ್ನು ಮ್ಯಾನೇಜ್ ಮಾಡುವುದಕ್ಕಾದರೆ ರೈತ ಬೆಳೆದಿದ್ದಕ್ಕೆ ಸರಿಯಾದ ಬೆಲೆ ಸಿಗುತ್ತದೆ. ಅಂತಿವಾಗಿ ಮಾಲನ್ನು ಕೊಂಡುಕೊಂಡು ತಿನ್ನತಕ್ಕಂಥ ಜನರು ಯಾವ ಬೆಲೆಯನ್ನು ಕೊಡುತ್ತಾರೋ, ಆ ಬೆಲೆಯಲ್ಲಿ ಸಿಂಹಪಾಲು ರೈತನಿಗೆ ಸಿಗುವಂಥ ವ್ಯವಸ್ಥೆಯಾಗಬೇಕು. ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಬಹುದಾದ ಹಲವಾರು ಕೆಸಲಗಳು ಇವೆ. ಇನ್ನು ಮುಂದಕ್ಕೆ ರೈತರುಗಳೇ ಕೋ—ಆಪರೇಟ್ ಆಗಿ ಮಾರ್ಕೆಟಿಂಗ್ ಫೆಡರೇಷನ್‌ಗಳನ್ನು ನಡೆಸುತ್ತೇವೆಂದು ಹೇಳಿದರೆ, ಅದಕ್ಕೆ ಎ ಪಿ ಎಂ. ಸಿ.ಗಳಿಂದ ಸಹಾಯ ಮಾಡಿಸುತ್ತೀರಾ ? ಅಗ್ರಿಕಲ್ಚರಲ್ ಪ್ರೊಡಕ್ಟ್ಸಿಂಗ್ ಮಾರ್ಕೆಟ್ ಕಮಿಟಿಯಲ್ಲಿ ಮಾಡಬೇಕಾದ ಕೆಲಸಗಳು ಇನ್ನೂ ಬಹಳ ಬಾಕಿ ಇವೆ. ನೀವು ಕೊಡುವ ಹಣವನ್ನಿ ಯೋಗ್ಯತೆ ಇದ್ದರೆ ಯೂನಿವರ್ಸಿಟಿಗಳವರು ನಡೆಸಿಕೊಂಡು ಹೋಗುತ್ತಾರೆ. ಸಾಕಾದರೆ ಬಿಟ್ಟು ಕೊಳ್ಳುತ್ತಾರೆ. ಅಗ್ರಿಕಲ್ಚರಲ್ ಪ್ರೊಡಕ್ಟ್ಸಿಂಗ್ ಮಾರ್ಕೆಟಿಂಗ್ ಕಮಿಟಿಯಲ್ಲಿರುವ ಹಣವನ್ನು ನೀವು ಯೂನಿವರ್ಸಿಟಿಗಳಿಗೆ ದಾನ ಹಾಕಿದರೆ ನಾಳೆ ದಿನ ಅಗ್ರಿಕಲ್ಚರಲ್ ಪ್ರೊಡಕ್ಟ್ಸಿಂಗ್ ಮಾರ್ಕೆಟ್ ಕಮಿಟಿಗಳಲ್ಲಿ ಹಣ ಇಲ್ಲದಿದ್ದರೆ ಯೂನಿವರ್ಸಿಟಿಗಳಿಂದ ಗ್ರಾಂಟ್ ಕೊಡಿಸುತ್ತೀರಾ ? ಇದು ಏಕೆ ಬೇಕು ? ಈ ರೀತಿ ಮಾಡುವುದರಿಂದ ಬ್ಯಾಡ್ ಪ್ರಿಸಿಡೆಂಟ್ ಆಗುತ್ತದೆ. ಇದರ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಸದಸ್ಯರುಗಳು ಒಂದು ತಿದ್ದುಪಡಿಯನ್ನು ತಂದಿದ್ದಾರೆ ಆ ತಿದ್ದುಪಡಿಗಳನ್ನು ಒಪ್ಪಲಿಕ್ಕೆ ಯೋಗ್ಯವಾಗಿವೆ ಎಲ್ಲೆಲ್ಲಿ ದುಡ್ಡು ಇದೆಯೋ ಅಲ್ಲೆಲ್ಲಾ ದಾನ ಧರ್ಮ ಮಾಡುವುದಕ್ಕೆ ನೀವು ತೀರ್ಮಾನಕ್ಕೆ ಬಂದರೆ ಇದು ಸರಿಯಾಗಿರುವುದಿಲ್ಲ. ಯೂನಿವರ್ಸಿಟಿಗಳಿಗೆ ಮಾತ್ರ ಕೊಡಲು ಇದೆಯೋ? ಮಾನ್ಯ ಕೆ. ಹೆಚ್. ಪಾಟೀಲರ ನೇತೃತ್ವದಲ್ಲಿ ನಡೆಯುತ್ತಿರುವ ಸಂಸ್ಥೆಗಳು ಒಂದೊಂದು ಯೂನಿವರ್ಸಿಟಿ ಮಾಡತಕ್ಕ ಕೆಲಸವನ್ನು ಒಂದೊಂದು ಸಂಸ್ಥೆ ಮಾಡಿಕೊಂಡು ಹೋಗುತ್ತಿವೆ.

ಶ್ರೀ ಕೆ. ಮಲ್ಲಪ್ಪ — ಯೂನಿವರ್ಸಿಟಿಗಳಿಗೆ ಗ್ರಾಂಟ್ ಕೊಡತಕ್ಕಂಥದ್ದು ಮ್ಯಾಂಡೇಟರಿ ಅಲ್ಲ. ಯಾವ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಕಮಿಟಿಯವರು ಹಣವನ್ನು ಕೊಡುವುದಕ್ಕೆ ಒಪ್ಪು

ತಪ್ಪಿರೋ ಆ ಮಾರ್ಕೆಟ್ ಕಮಿಟಿಯಿಂದ ವಾತ್ರ ಹಣವನ್ನು ತೆಗೆದು ಕೊಳ್ಳಲಾಗುತ್ತದೆ. ಇಷ್ಟು ಪರ್‌ಸೆಂಟ್ ಕೊಡಬೇಕು, ಅಷ್ಟು ಪರ್‌ಸೆಂಟ್ ಕೊಡಬೇಕೆಂದು ನಿಯಮವನ್ನು ಮಾಡಿಲ್ಲ. ಎಲ್ಲಾ ಮಾರ್ಕೆಟಿಂಗ್ ಕಮಿಟಿಯವರು ಕೊಡಲೇ ಬೇಕೆಂದು ಕಂಪಲ್ಸರಿ ರೂಲ್ಸ್‌ನ್ನು ಇದರಲ್ಲಿ ತಂದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇದರಲ್ಲಿ ಕಂಪಲ್ಸರಿ ಮಾಡುವುದಕ್ಕೆ ಬರುವುದೂ ಇಲ್ಲ. ಕಂಪಲ್ಸರಿ ಹೇಗಾಗುತ್ತದೆಂದು ನನಗೆ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ.— ಈ ತಿದ್ದುಪಡಿ ಮಸೂದೆಯನ್ನು ತರುವುದಕ್ಕೆ ಮೊದಲು ಕರ್ನಾಟಕ ರಾಜ್ಯದಲ್ಲಿ ಎಷ್ಟೆಷ್ಟು ಎ. ಪಿ. ಎಂ. ಸಿ.ಗಳು ಇವೆಯೋ ಅವುಗಳನ್ನು ಕನ್‌ಸಲ್ಟ್ ಮಾಡಿದ್ದಿರಾ ? ಹಣವನ್ನು ಕೊಡುತ್ತೇವೆಂದು ಯಾವ ಎ. ಪಿ. ಎಂ. ಸಿ.ಗಳು ಮುಂದೆ ಬಂದಿವೆ ? ಎಷ್ಟೆಷ್ಟು ಹಣವನ್ನು ಕೊಡುವುದಕ್ಕೆ ಮುಂದೆ ಬಂದಿವೆ ? ಹಣವನ್ನು ತೆಗೆದುಕೊಳ್ಳುವ ಬಗ್ಗೆ ಎ. ಪಿ. ಎಂ. ಸಿ. ಗಳ ಅಭಿಪ್ರಾಯವನ್ನು ಕೇಳಿದ್ದೀರಾ ಎಂಬುದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ —ಕಾನೂನು ನಿಮಗೆ ಸ್ವತಂತ್ರ್ಯವಾಗಿ ಮಾಡುವುದಕ್ಕೆ ಬರುತ್ತದೆ ಎಂದರೆ ನೀವು ಮಾಡುತ್ತೀರಾ ? ಹೀಗೆ ಕಾನೂನನ್ನು ನಮಗೂ. ನಿಮಗೂ ಮಾಡುವುದಕ್ಕೆ ಬರುತ್ತದೆಯೇ ? ನಾವುಗಳು ಜನರನ್ನು ಕೇಳಿಯೇ ಮಾಡಬೇಕಾಗುತ್ತದೆ. ನೀವೆ ಹೇಳಂತ್ತೀರಿ ಜನರ ಕೈಗೆ ಅಧಿಕಾರವನ್ನುಕೊಟ್ಟಿದ್ದೇವೆ ಎಂದು...

ಶ್ರೀ ಕೆ. ಎಚ್. ಶ್ರೀನಿವಾಸ್. ಒಂದು ಸಾರಿ ಈ ರೀತಿಯಾಗಿ ಪ್ರಾವಿಜನ್ ಮಾಡಿದ ಕೂಡಲೇ ಅದು ಅಷ್ಟಕ್ಕೆ ನಿಲ್ಲುವುದಿಲ್ಲ. ಮತ್ತೆ ಅದಕ್ಕೆ ಒಂದು ಡಜನ್ ತಿದ್ದುಪಡಿ ಮಾಡಬೇಕಾಗುತ್ತದೆ. ಹೀಗೆಲ್ಲಾ ಮಾಡಿದ ಮೇಲೆ ಅದು ಕೊನೆಯಲ್ಲಿ ಏನಾಗುತ್ತದೆ ಅಂದರೆ, ಎಪಿಎಂಸಿಯು ಒಂದು ಧಾರ್ಮಿಕ ದತ್ತಿ ಸಂಸ್ಥೆ ಅಂದರೆ ಧಾನಧರ್ಮಗಳನ್ನು ಮಾಡುವ ಸಂಸ್ಥೆ ಆಗುತ್ತದೆ. ಅವರಿಗೆ ದಾನ ಧರ್ಮವನ್ನು ಮಾಡುವುದಕ್ಕೆ ಒಂದು ಅವಕಾಶವನ್ನು ಮಾತ್ರಿಕೊಟ್ಟ ಹಾಗೆ ಆಗುತ್ತದೆ. ಆಗ ಒಂದು ಗಾದೆ ಮಾತಿನಂತೆ '' ಕೊಟ್ಟವ ಕೊಡಂಗಿ, ಇಸಕೊಂಡವ ವೀರಭದ್ರ ಎನ್ನುವ ಹಾಗೆ ಆಗುತ್ತದೆ. ಇದು ಹಳಿತಪ್ಪಿದ ರೈಲಿನಂತೆ ಆಗುತ್ತದೆ. ಅವಕ್ಕೊಸ್ಕರವಾಗಿ ಬೇರೆ ಬೇರೆ ಸರಕಾರಗಳು ಈ ರಾಜ್ಯದಲ್ಲಿ ಬಂದರೂ ಕೂಡ ಯಾವುದೇ ಸರಕಾರವು ಈ ರೀತಿಯ ತಿದ್ದುಪಡಿಯನ್ನು ಮಾಡಲಿಕ್ಕೆ ಹೋಗಲ್ಲಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಸಹಕಾರ ಸಚಿವರಾಗಿದ್ದಾಗ, ನಾನು ಶಾಸಕನಾಗಿದ್ದೆ. ಆಗ ಕೆಲವರು ಒಕ್ಕತ ತಂದಾಗ ಇವರು ಆಗುವುದಿಲ್ಲ ಎಂದು ಹೇಳಿದರು. ಅವರಿಗೆ ಈ ವಿಚಾರ ನೆನಪು ಇರಬಹುದು, ನನಗೂ ಕೂಡ ಅಷ್ಟೆ ಚೆನ್ನಾಗಿ ನೆನಪು ಇದೆ. ಈಗ ನೀವು ಅಷ್ಟಿಷ್ಟು ಅನುಭವವನ್ನು ಮಾಡಂತ್ತಾ ಹೋಗುವುದು ಬೇಡ. ಫ್ಲಾಗ್‌ಗೇಟ್ಸ್‌ನ್ನು ತೆರೆಯುತ್ತಾ ಹೋಗುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತೀರಿ ? ಮಾರ್ಕೆಟಿಂಗ್ ಸಮಿತಿಗೆ ಚುನಾಯಿತರಾಗಿರತಕ್ಕಂಥವರು ಇದ್ದಾರೆ. ಅವರಿಗೆ ಯಾವುದು ಸೂಕ್ತ ಎಂದು ಕಾಣಿಸುತ್ತದೆಯೋ ರೈತರ ಹಿತಾಸಕ್ತಿಯ ದೃಷ್ಟಿಯಿಂದ ಯಾವುದು ಅವರಿಗೆ ಒಳ್ಳೆಯದು ಎಂದು ಕಾಣಿಸುತ್ತದೆಯೋ ಅದನ್ನು ಮಾಡಲು ಅವರಿಗೆ ಅಧಿಕಾರವನ್ನು ಕೊಟ್ಟುಬಿಡಿ. ವಿಕೇಂದ್ರೀಕರಣ ಮಾಡಿದವರಿಗೆ ನಿಮ್ಮ ಪರ್‌ಮಿಷನ್ ಏತಕ್ಕಾಗಿ ಬೇಕು ? ಅವರ ಹತ್ತಿರ ಹಣ ಇದ್ದರೆ ಅವರೇ ಅವರ ಖುಷಿ ಕಂಡಂತೆ ಖರ್ಚು ಮಾಡಲಿ, ಹಾಗೆ ಮಾಡುತ್ತೀರಾ ? ಅದು ಸಾಧ್ಯವೇ ? ಸುಮ್ಮನೆ ಒಂದು ಅರ್ಥಹೀನ ವಾದಂತಹ ಒಂದುತಿದ್ದುಪಡಿಯನ್ನು ತಂದುಅದರಿಂದ ಅನರ್ಥವಾಗುತ್ತದೆ ಎಂಬುದನ್ನು ನಾವು ಮನಗಾಣ ಬೇಕು. ಇದು ಅರ್ಥಹೀನವಾಗಿರತ್ತದೆ ಎಂಬುದನ್ನು ಮನಗಾಣಬೇಕು, ಸರಕಾರಕ್ಕೆ ಈ ತಿದ್ದುಪಡಿಯ ಅಗತ್ಯ ಇಲ್ಲ ಯಾವುದು ಬೇಕು ಯಾವುದು ಬೇಡ ಎಂಬ ಬಗ್ಗೆ ಒಂದು ನಿರ್ದಿಷ್ಟ ಅರಿವು ಇರಬೇಕು. ಸರಕಾರಕ್ಕೆ ಏನು ರಿಸರ್ಚ್ ಇಂಜಿನೀಯರಿಂಗ್ ಆಗಬೇಕು, ಏನು ಮಾರ್ಕೆಟ್ ರಿಸರ್ಚ್ ಆಗಬೇಕು, ಅದನ್ನು ಬೇರೆ ರೀತಿಯಲ್ಲಿ ಮಾಡಬಹುದು ಆದುದರಿಂದ ಈ ತಿದ್ದುಪಡಿ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ನಾವು ಇಲ್ಲಿ ಮೂರೂ ಗಂಟೆಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿತ್ತು.

ಅಧ್ಯಕ್ಷರು.—ತಾವು ಹೇಳಿದ ವಿಷಯವನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ. ಅದಕ್ಕೆ ಬೇಕಾದ ಮಾಹಿತಿಯನ್ನು ತರಿಸಿಕೊಡುತ್ತೇನೆ. ಮಾನ್ಯ ಗೃಹಮಂತ್ರಿಯವರು ಆ ರೀತಿ ತಿಳಿಸಿದ್ದಾರೆ. ಅವರಿಗೂ ಕೂಡ ನಾಳೆ ಬೆಳಿಗ್ಗೆ ಈ ವಿಷಯವನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರಕಾರದ ಹತ್ತಿರ ಮಾಹಿತಿ ಇಲ್ಲ ಎಂದರೆ, ಅವರು ಸರ್ಕಾರವನ್ನು ಹೇಗೆ, ನಡೆಸುತ್ತಾರೆ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಗೃಹಮಂತ್ರಿಯವರು ಕೂಡ ನಾಳೆ ಬೆಳಿಗ್ಗೆ ಇದನ್ನು ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ನಾವು ಮುಂಜಾನೆ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ರೂಲ್ಸ್ ೬೮ರ ಕೆಳಗೆ ಚರ್ಚಾವಕಾಶವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನಾನು ಗೃಹಮಂತ್ರಿಯವರು ಒಪ್ಪಿದರೆ, ಮಧ್ಯಾಹ್ನ ಮೂರು ಗಂಟೆಗೆ ಇಡೋಣ ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹೇಳಿದ್ದನ್ನು ಅವರು ಒಪ್ಪಿಕೊಳ್ಳಲಿಲ್ಲ ಎಂದರೆ ಅದರ ಅರ್ಥ ಏನು ? ತಾವು ಈಗ ತೆಗೆದುಕೊಳ್ಳಿ, ಮಾನ್ಯ ಗೃಹಮಂತ್ರಿಯವರು ಬರುತ್ತಾರೆ

ಅಧ್ಯಕ್ಷರು.—ಮಾನ್ಯ ಗೃಹಮಂತ್ರಿಯವರು ಆಕಸ್ಮಾತ್ತಾಗಿ ಒಪ್ಪಿದರೆ ಮಧ್ಯಾಹ್ನ ಮೂರು ಗಂಟೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬೇಡ ಎಂದು ಹೇಳಿದರೆ ನೀವು ಹಾಗೆ ಒಪ್ಪಿಕೊಳ್ಳುತ್ತೀರಾ ? ಅವರು ಹೇಳಿದ ಹಾಗೆ ತಾವು ನಡೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ನಾಳೆ ಬೆಳಿಗ್ಗೆ ಈ ವಿಚಾರವನ್ನು ಇಡೋಣ. ನೀವೂ ತಯಾರಾಗಿ ಬನ್ನಿ ಅವರು ತಯಾರಾಗಿ ಬರಲಿ...

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ನೀವು ಅಧ್ಯಕ್ಷರೋ, ಅವರು ಅಧ್ಯಕ್ಷರೋ ?

ಅಧ್ಯಕ್ಷರು.—ನಾಳೆ ಬೆಳಿಗ್ಗೆ ಈ ವಿಷಯವನ್ನು ತೆಗೆದುಕೊಳ್ಳೋಣ. ನಾಳೆ ಬೆಳಿಗ್ಗೆ ೯ ಗಂಟೆಗೆ ಅಧಿವೇಶನ ಕಾರ್ಯಕಲಾಪ ಪ್ರಾರಂಭವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಅವರ ಮೇಲೆ ಸಭೆ ನಡೆಸುತ್ತೀರೋ ? ನೀವೇ ಹೇಳಿದ್ದೀರಿ, ಇವತ್ತು ಮಧ್ಯಾಹ್ನ ಮೂರು ಗಂಟೆಗೆ ತೆಗೆದುಕೊಳ್ಳೋಣ ಎಂದು ಅವರನ್ನು ಕೇಳಿಕೊಳ್ಳುತ್ತೇವೆಂದು ಹೇಳುತ್ತೀರಿ. ಏಕೆ ಕೇಳಿ ಹೇಳಬೇಕು ?

(ಗೊಂದಲ)

ಅಧ್ಯಕ್ಷರು.—ಅವರು ಒಪ್ಪಿಕೊಂಡಿದ್ದಾರೆ ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ. ನಾನಂ ರೂಲಿಂಗ್ ಕೊಟ್ಟಿದ್ದೇನೆ. ಅವರು ಒಪ್ಪಿದರೆ ಮಧ್ಯಾಹ್ನ ಮೂರು ಗಂಟೆಗೆ ಇಡೋಣವೆಂದು ಹೇಳಿದ್ದೆ.

ಶ್ರೀ ಬಿ. ಬಸವಲಿಂಗಪ್ಪ.—ಕಾರಣವೇನು, ಇವತ್ತು ಏಕೆ ಬೇಡ ?

(ಗೊಂದಲ)

ಅಧ್ಯಕ್ಷರು.—ನಾಳೆ ಎಂದು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಬಿ ಬಸವಲಿಂಗಪ್ಪ.—ಬೇರೆ ಉದ್ದೇಶವಿದೆಯೇ ?

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾಹಿತಿ ತರಿಸಿಕೊಳ್ಳಲು ಆರು ತಿಂಗಳು ಬೇಕೇ ?

(ಗೊಂದಲ)

ಅಧ್ಯಕ್ಷರು —ನಾಳೆ ಎಂದು ರೂಲಿಂಗ್ ಕೊಟ್ಟಿದ್ದೇನೆ ಸರಕಾರವೂ ಕೂಡ ಇದಕ್ಕೆ ಒಪ್ಪಿ ಕೊಂಡಿದೆ.

ಶ್ರೀ ಎಸ್. ಬಂಗಾರಪ್ಪ —ಸರಕಾರದವರು ಅಂದರೆ ಗೃಹ ಸಚಿವರು ಪತ್ರ ಬರೆದಿದ್ದಾರೆ ಎಂದು ಹೇಳಿದ್ದೀರಿ. ಇದಕ್ಕೆ ಆದ್ಯತೆ ಕೊಡಬೇಕು ಇದನ್ನು ತುರ್ತಾಗಿ ತೆಗೆದುಕೊಳ್ಳಬೇಕೆಂ ಎಂದು ಪ್ರಾಮಾಣಿಕ ಒತ್ತಡ ತರತಕ್ಕಂತಹ ಪ್ರಯತ್ನವನ್ನು ನಾವೆಲ್ಲಾ ಮಾಡಿದ್ದೇವೆ. ನಿಯಮ ೬೮ರ ಪ್ರಕಾರ ತೆಗೆದುಕೊಳ್ಳೋಣವೆಂದು ಹೇಳಿ ಅದಕ್ಕೆ ಕೂಡ ಒಪ್ಪಿಗೆಯನ್ನು ಕೊಟ್ಟಿದ್ದೀರಿ ಅದಕ್ಕೆ ಇಲ್ಲವೆಂದು ನಾವು ಹೇಳುತ್ತಿಲ್ಲ ಈಗ ನಾಳೆ ತೆಗೆದುಕೊಳ್ಳೋಣವೆಂದು ತಾವು ಏನು ಹೇಳುತ್ತೀರಿ ..

(ಗೊಂದಲ)

ಅಧ್ಯಕ್ಷರು. —ಅಡ್ಜರ್ನ್‌ಮೆಂಟ್ ಮೋಷನ್ ಬೇಡ. ೬೮ರ ಪ್ರಕಾರ ತೆಗೆದುಕೊಳ್ಳೋಣವೆಂದು ಹೇಳಿದ್ದೇನೆ ಅದರ ಬಗ್ಗೆ ಚರ್ಚೆ ಬೇಡ. ನಾಳೆ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ,—ತಾವು ರೂಲಿಂಗ್ ಕೊಟ್ಟಿದ್ದೀರಿ ೬೮ರ ಪ್ರಕಾರ ತೆಗೆದುಕೊಳ್ಳೋಣ ಎಂದು...

(ಗೊಂದಲ)

ಅಧ್ಯಕ್ಷರು.—ಮಾನ್ಯ ಗೃಹ ಮಂತ್ರಿಗಳ ಹತ್ತಿರ ಮಾತನಾಡೋಣವೆಂದು ಹೇಳಿದ್ದೆ. ಅವರು ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ ಎಂದು ನನಗೆ ಪತ್ರ ಬರೆದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಪತ್ರ ಬಗೆದಿದ್ದಾರೆಂದು ಹೇಳಿದ್ದೀರಿ ಏನು ಕಾರಣ ಕೊಟ್ಟು ಪತ್ರ ಬರೆದಿದ್ದಾರೆ, ಮಾನ್ಯ ಸದಸ್ಯರಿಗೆ ಇರತಕ್ಕಂತಹ ಹಕ್ಕನ್ನು ತಾವು ರಕ್ಷಣೆ ಮಾಡಬೇಕಾಗಿದೆ. ಇದು ಬಹಳ ಗಹನವಾದಂತಹ ವಿಚಾರ, ಸಾರ್ವಜನಿಕವಾಗಿ ಬಹಳ ಜರೂರಾಗಿರ ತಕ್ಕಂತಹ ವಿಚಾರ, ಬಹಳ ಪ್ರಾಮುಖ್ಯತೆ ಇರತಕ್ಕಂತಹ ವಿಚಾರ. ತಾವು ಸದಸ್ಯರ ಹಕ್ಕನ್ನು ರಕ್ಷಣೆ ಮಾಡಬೇಕಾಗುತ್ತದೆ.

ಅಧ್ಯಕ್ಷರು.— ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಸರಕಾರ ಕೂಡ ಒಪ್ಪಿದೆ. ಅವರು ಏನು ಕಾರಣ ಹೇಳಿದ್ದಾರೆಂದು ಹೇಳಬೇಕೇ '' ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ದಲಿತರ ಮೇಲೆ ನಡೆದಿರುವ ದೌರ್ಜನ್ಯ ಅದಕ್ಕೆ ಪೋಲೀಸ್ ಇಲಾಖೆಯ ಕಾರ್ಯಕ್ಕೆ ಇರುವ ವಿಚಾರವನ್ನು ಚರ್ಚಿಸುವ ಬಗ್ಗೆ, ಇದನ್ನು ಮುಂದಕ್ಕೆ ಹಾಕಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಿನಾಂಕ ೨೨-೧-೮೮ರ ಮಧ್ಯಾಹ್ನ ಈ ನಿಲುವಳಿ ಸೂಚನೆಯನ್ನು ತೆಗೆದುಕೊಂಡರೆ ನನ್ನ ಹತ್ತಿರ ಅವಶ್ಯಕವಾದ ಮಾಹಿತಿ ಇರುವುದಿಲ್ಲ ಆದುದರಿಂದ ೨೨-೧-೮೮ರ ಮಧ್ಯಾಹ್ನ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿಯನ್ನು ಸಂಗ್ರಹಿಸಬೇಕಾಗಿದೆ. ದಿನಾಂಕ ೨೨-೧-೮೮ರ ಮಧ್ಯಾಹ್ನ ಇದನ್ನು ಚರ್ಚಿಸಲು ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. '' ಎಂದು ಪತ್ರ ಬರೆದಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಜಾಲಪ್ಪನವರು ಕೊಟ್ಟಿರತಕ್ಕಂತಹ ಕಾರಣವೇನೆಂದು ಪತ್ರವನ್ನು ಓದಿದ್ದೀರಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ದಲಿತರ ಮೇಲೆ ಆಗಿರತಕ್ಕಂತಹ ಅನ್ಯಾಯಗಳ ಪಟ್ಟಿ ಇದರ ವಿಚಾರ ಪ್ರತಿಯೊಂದು ಜಿಲ್ಲೆಯಲ್ಲೂ...

(ಗೊಂದಲ)

ಅಧ್ಯಕ್ಷರು. —ನಾನು ರೂಲಿಂಗ್ ಕೊಟ್ಟಮೇಲೆ ದಯವಿಟ್ಟು ಇದನ್ನು ಪ್ರಶ್ನೆ ಮಾಡುವುದು ಬೇಡ.

(ಗೊಂದಲ)

ಅಧ್ಯಕ್ಷರು.—ನಾನು ಮೊದಲೇ ಏನು ಹೇಳಿದೆ ಎಂದರೆ ಅವರು ಒಪ್ಪಿದರೆ ಇವತ್ತೇ ಮಧ್ಯಾಹ್ನ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಬಗ್ಗೆ ಅಪಾರವಾದ ಗೌರವ ನಮಗಿದೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. ಇದನ್ನು ನಾಳೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಅಭಿಪ್ರಾಯವನ್ನು ಕೇಳಿ ರೂಲಿಂಗ್ ಕೊಟ್ಟಿದ್ದೀರಿ. ಆದರೆ ನಿಮ್ಮ ಅಭಿಪ್ರಾಯ ಏನು ?

(ಗೊಂದಲ)

ಅಧ್ಯಕ್ಷರು.—ನಿಮ್ಮ ನೋಟೀಸ್ ಪ್ರಕಾರ ಅವಕಾಶಕ್ಕೆ ಯೋಗ್ಯ ಇದೆ ಎಂದು ಕಂಡಮೇಲೆ ಸರ್ಕಾರದವರು ಕೂಡಾ ಇದನ್ನು ಕಂಡಮೇಲೆ ಅವರು ಒಪ್ಪಿಕೊಂಡಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇದು ಮಹಾನ್ ದೊಡ್ಡ ಸಹಾಯ ಮಾಡಿರತಕ್ಕಂಥ ವಿಷಯ ಏನೂ ಅಲ್ಲ. ಇದು ನಮ್ಮೆಲ್ಲರ ಹಕ್ಕಿನ ಪ್ರಶ್ನೆ. ನಮ್ಮ ಹಕ್ಕನ್ನು ಇಲ್ಲಿ ಚಲಾವಣೆ ಮಾಡಬೇಕಾಗಿತ್ತದೆ, ಅದನ್ನು ಹಾಗೆಯೇ ಬಿಡುವುದಕ್ಕಾಗುವುದಿಲ್ಲ. ನಿಮ್ಮ ಬಗ್ಗೆ ಅಪಾರವಾದ ನಂಬಿಕೆಯನ್ನು ಇಟ್ಟು ಕೊಂಡಿದ್ದೇವೆ. ಅವರಿಗೆ ನೀವು ಕನ್‌ವಿನ್ಸ್ ಮಾಡಬಹುದು ಎಂದು ತಿಳಿದುಕೊಂಡಿದ್ದೆವು.

ಅಧ್ಯಕ್ಷರು.—ನಾಳೆ ಬೆಳಿಗ್ಗೆ ಚರ್ಚೆ ಮಾಡೋಣ, ನಾಳೆ ಅವಕಾಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು —ನಾಳೆ ಬೆಳಿಗ್ಗೆ ಚರ್ಚೆ ಮಾಡೋಣ. ಮತ್ತೆ ನಿಮಗೆ ಅವಕಾಶ ಕೊಡೋಣ ಎಂದು ಕೂಡಾ ಹೇಳಿದ್ದೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರವನ್ನು ನಿಯಮಾವಳಿ ೬೮ರ ಪ್ರಕಾರ ಪ್ರಾರಂಭ ಮಾಡೋಣ ಬಹಳ ಜನ ಮಾನ್ಯ ಸದಸ್ಯರು ಆ ಕಡೆ, ಈ ಕಡೆ ಮಾತನಾಡುವವರು ಇದ್ದಾರೆ, ಚರ್ಚೆಯನ್ನು ಪ್ರಾರಂಭ ಮಾಡೋಣ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. ನಾಳೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ರೂಲಿಂಗ್ ಹೆಸರಿನಲ್ಲಿ ನಮ್ಮ ಹಕ್ಕುಗಳನ್ನು ತುಳಿದುಹಾಕುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಿಮಗೆ ರಕ್ಷಣೆ ಕೊಡತಕ್ಕಂಥದ್ದು ನನ್ನ ಕರ್ತವ್ಯ.

(ಗೊಂದಲ)

ಅಧ್ಯಕ್ಷರು.—ನಾಳೆಗೆ ಚರ್ಚೆ ಇಟ್ಟುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಅದು ಆಗುವುದಿಲ್ಲ. ರೂಲಿಂಗ್ ಹೆಸರಿನಲ್ಲಿ ನಮ್ಮ ಹಕ್ಕನ್ನು ತಾವು ಮೊಟುಕು ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.--ನಾನು ರೂಲಿಂಗ್ ಕೊಟ್ಟಿ ಮೇಲೆ ಇದರ ಮೇಲೆ ಈ ರೀತಿ ಮಾತನಾಡುವುದು ಬೇಡ. ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ.—ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ಅದು ಆಗುವುದಲ್ಲ. ನಾನು ಒಪ್ಪಿಸಂತ್ತೇನೆ ಎಂದು ಹೇಳಿದ್ದೇನೆ. ಸರ್ಕಾರದವರು ಕೂಡಾ ಒಪ್ಪಿದ್ದಾರೆ. ಇದನ್ನು ನಾಳೆ ತೆಗೆದುಕೊಳ್ಳೋಣ ಎಂದು ರೂಲಿಂಗ್ ಕೊಟ್ಟಿದ್ದೇನೆ. ಚರ್ಚೆಗೆ ನಾಳೆ ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.--ಇದು ಬಹಳ ಲಘುವಾಗಿ ತೆಗೆದುಕೊಂಡಿರತಕ್ಕಂಥ ರೀತಿಯಾಗಿದೆ.

(ಗೊಂದಲ)

ಅಧ್ಯಕ್ಷರು.--ಬಹಳ ಲಘುವಾಗಿ ತೆಗೆದುಕೊಳ್ಳುವುದಿಲ್ಲ. ಇದನ್ನು ಸರ್ಕಾರ ಕೂಡಾ ಲಘುವಾಗಿ ತೆಗೆದುಕೊಳ್ಳುವುದಿಲ್ಲ. ಸರ್ಕಾರದವರು ಕೂಡಾ ನಾಳೆಗೆ ಒಪ್ಪಿಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಸರ್ಕಾರ ಲಘುವಾಗಿ ತೆಗೆದುಕೊಳ್ಳುವುದಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅವರ ಹೇಳಿಕೆಯನ್ನು ನೀವು ಪತಕ್ಕೆ ಒಪ್ಪಿಕೊಂಡಿರಿ.

ಅಧ್ಯಕ್ಷರು.--ನಾನು ನಿಮ್ಮ ಒತ್ತಡಕ್ಕೂ ಮಣಿಯುವುದಿಲ್ಲ. ಅವರ ಒತ್ತಡಕ್ಕೂ ಮಣಿಯುವುದಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್,--ಮಾನ್ಯ ಅಧ್ಯಕ್ಷರೇ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರಕ್ಕೆ ಜವಾಬ್ದಾರಿ ಇರಬೇಕಾಗುತ್ತದೆ. ಇವತ್ತು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.--ನಾಳೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಧರ್ಮಸಿಂಗ್.--ನಿಯಮ ೬೮ರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಾಗಿದೆ ಎಂದು ಮಾತ್ರ ರೂಲಿಂಗ್ ಕೊಟ್ಟಿದ್ದೀರಿ.

ಅಧ್ಯಕ್ಷರು.--ಈ ದಿನ ಮಾಹಿತಿ ಇಲ್ಲದೇ ಇರುವುದರಿಂದ ನಾಳೆ ದಿನ ಮಾಹಿತಿ ತರಿಸಿಕೊಳ್ಳುತ್ತೇನೆ ಆದ್ದರಿಂದ ನಾಳೆಗೆ ಚರ್ಚೆಯನ್ನು ಹಾಕಬೇಕೆಂದು ಗೃಹ ಮಂತ್ರಿಯವರು ನನಗೆ ಲೆಟರ್ ಬರೆದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.--ಲೆಟರ್ ಬಂತು ಎಂದು ಚರ್ಚೆಯನ್ನು ಮುಂದಕ್ಕೆ ಹಾಕುವುದಕ್ಕಾಗುವುದು ಸರಿಯಲ್ಲ, ನಾಳೆ ದಿನ ಇನ್ನೊಂದು ವಿಷಯಕ್ಕೆ ಕಾಗದ ಬರೆದು ತಿಳಿಸುತ್ತಾರೆ, ಅವರು ಬರೆದರೆಂದು ಗೊತ್ತು ಮಾಡಿರುವುದನ್ನು ಬದಲಾವಣೆ ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ನಾಳೆ ಚರ್ಚೆ ಮಾಡಬಹುದೆಂದು ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ಕ್ಷಮಿಸಬೇಕು, ನಿಮ್ಮ ರೂಲಿಂಗನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಬೆಳಿಗ್ಗೆ ನಾವು ಈ ವಿಷಯವನ್ನು ಮಧ್ಯಾಹ್ನ ೩ ಗಂಟೆಗೆ ಚರ್ಚೆಗೆ ತೆಗೆದುಕೊಳ್ಳೋಣ ವೆಂದು ಹೇಳಿದ್ದಿರಿ. ಅದರಂತೆ ಈಗ ಚರ್ಚೆಗೆ ಅವಕಾಶ ಮಾಡಿ ಕೊಡಬೇಕೆಂದು ತಮ್ಮಲ್ಲಿ ಕೇಳುತ್ತೇವೆ

ಶ್ರೀ ಧರ್ಮಸಿಂಗ್.--ಮಾನ್ಯ ವಲ್ಲಿಕಾರ್ಜುನ ಖರ್ಗೆಯವರು ನಿಲುವಳಿ ಸೂಚನೆಗೆ ಅವಕಾಶ ಕೋರಿ ಪತ್ರ ಕೊಟ್ಟು ಮೇಲೆ ಅದನ್ನು ನಿಯಮ ೬೮ರ ಮೇಲೆ ಡಿಸ್ಕಷನ್ ಮಾಡಬಹುದೆಂದು ನಾವು ರೂಲಿಂಗ್ ಕೊಟ್ಟಿದ್ದೆವು. ಅದರಂತೆ ಈಗ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಚರ್ಚೆಗೆ ಅವಕಾಶ ಮಾಡಿಕೊಡಬೇಕೆನ್ನುವುದೇ ನನ್ನ ಉದ್ದೇಶ ಹಾಗೂ ಸರ್ಕಾರದ ಉದ್ದೇಶವಾಗಿದೆ. ಮಾನ್ಯ ಗೃಹ ಸಚಿವರು ನಾಳೆ ಚರ್ಚೆಗೆ ಇಟ್ಟುಕೊಳ್ಳಿ ಮಾಹಿತಿ ತರಿಸುವುದಕ್ಕೆ ಸಮಯಬೇಕು. ಎಂದು ತಿಳಿಸಿದ್ದರಿಂದ ನಾಳೆ ದಿನ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ.—ಅವರ ಹತ್ತಿರ ಈಗ ಮಾಹಿತಿ ಇಲ್ಲದಿದ್ದರೆ. ಒಂದು ಕೆಲಸ ಮಾಡಿ, ಈಗ ಚರ್ಚೆಗೆ ಅವಕಾಶ ಮಾಡಿಕೊಡಿ ಚರ್ಚೆ ಇವತ್ತು ಪ್ರಾರಂಭವಾಗಲಿ. ನಾಳೆ ದಿನ ಚರ್ಚೆ ಮುಕ್ತಾಯವಾದ ನಂತರ ನಮಗೆ ಮಾಹಿತಿ ಕೊಡಲಿ.

ಅಧ್ಯಕ್ಷರು.—ನಾಳೆ ದಿನವೇ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ೩ ಗಂಟೆಗೆ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೇನೆಂದು ತಾವೇ ಬೆಳಗ್ಗೆ ಹೇಳಿದ್ದೀರಿ. ಅದರಂತೆ ಚರ್ಚೆಗೆ ಈಗ ಅವಕಾಶ ಕೊಡಿ. ರೂಲ್ ೬೮ರ ಪ್ರಕಾರ ನೀವು ಚರ್ಚೆಯನ್ನು ಮಧ್ಯಾಹ್ನ ೩ ಗಂಟೆಗೆ ಚರ್ಚೆ ಮಾಡಬಹುದೆಂದು ಹೇಳಿದ್ದಕ್ಕೇ ನಾವು ಬೆಳಿಗ್ಗೆ ಸಮ್ಮತಿಸಿದ್ದೆವು.

ಅಧ್ಯಕ್ಷರು.—ಮಾನ್ಯ ಗೃಹ ಸಚಿವರು ಮಾಹಿತಿ ಇಲ್ಲವೆಂದು ಪತ್ರ ಬರೆದಿರುವುದರಿಂದ ಈಗ ಚರ್ಚೆಗೆ ಅವಕಾಶ ಕೊಡುವುದಿಲ್ಲ.

ಶ್ರೀ ಬಿ. ಜಿ. ಕೊಟ್ರಪ್ಪ.—ಸಭಾಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಬೆಳಿಗ್ಗೆ ನಾವು ಈ ವಿಷಯವನ್ನು ರೈಸ್ ಮಾಡಿದಾಗ, ಮಧ್ಯಾಹ್ನ ೩ ಗಂಟೆಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಿರಿ.

ಅಧ್ಯಕ್ಷರು.—ನಾಳೆ ದಿನ ಚರ್ಚೆ ಮಾಡಿ. ಮಾನ್ಯ ಗೃಹ ಮಂತ್ರಿಯವರು ಒಪ್ಪಿದರೆ ಈ ದಿನ ಮಧ್ಯಾಹ್ನ ೩ ಗಂಟೆಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೆ. ಆದರೆ, ಗೃಹ ಮಂತ್ರಿಯವರು ನಾಳೆಗೆ ಚರ್ಚೆಗೆ ಹಾಕಿಕೊಳ್ಳಬೇಕೆಂದು ಹೇಳಿದ್ದರಿಂದ ಈ ವಿಷಯವನ್ನು ನಾಳೆಗೆ ಹಾಕಿರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅವರು ಲೆಟರ್ ಬರೆದರು, ಆ ಲೆಟರ್ ಮೇಲೆ ರೂಲಿಂಗ್ ಕೊಡುವುದೇ ?

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವು ಈ ವಿಷಯವನ್ನು ನಿಲುವಳಿ ಸೂಚನೆಗೆ ಕಳುಹಿಸಿಕೊಟ್ಟಿದ್ದೆವು ಅದನ್ನು ನೀವು ನಿಯಮ ೬೮ರ ಮೇಲೆ ಚರ್ಚೆಗೆ ಕೊಟ್ಟಿರಿ. ಆದಾಗ್ಯೂ ನಾವು ಒಪ್ಪಿಕೊಂಡೆವು. ಆದ್ದರಿಂದ, ನಮ್ಮನ್ನು ನೀವು ಮೆಚ್ಚಿಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನಾಳೆ ದಿನ ಚರ್ಚೆ ಮಾಡಬಹುದೆಂದು ರೂಲಿಂಗ್ ಕೊಟ್ಟಿರುವುದರಿಂದ ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಈಗ ಚರ್ಚೆಗೆ ಒಪ್ಪಿಲ್ಲವೆಂದು ಹೇಳುವುದು ಸರಿಯಲ್ಲ. ತಾವು ಇದನ್ನು ಚರ್ಚೆಗೆ ಕೊಡುತ್ತೇನೆಂದು ಹೇಳಿದ್ದೀರಿ. ಅದರಂತೆ ಚರ್ಚೆಗೆ ಅವಕಾಶ ಕೊಡಿ. ತಮ್ಮ ಮೇಲೆ ನಮಗೆ ಗೌರವ ಇದೆ.

ಅಧ್ಯಕ್ಷರು.—ರೂಲಿಂಗ್ ಕೊಟ್ಟುಬಿಟ್ಟಿದ್ದೇನೆ. ನಾಳೆಗೆ ಅವಕಾಶ ಕೊಡುತ್ತೇನೆ. ಈಗ ಮಾತನಾಡುವುದರಿಂದ ಏನೂ ಪ್ರಯೋಜನ ಇಲ್ಲ.

೩—೩೦ ಪಿ. ಎಂ.

ಅಧ್ಯಕ್ಷರು.—ನಾಳೆ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಗೃಹ ಮಂತ್ರಿಗಳು ಬರೆದ ಪತ್ರದ ಆಧಾರದ ಮೇಲೆ ನೀವು ಆ ನಿರ್ಧಾರಕ್ಕೆ ಬಂದಿರುವುದು ಸರಿಯಲ್ಲ. ನೀವು ಸರ್ಕಾರದ ಜೊತೆ ಮಾತುಕತೆ ನಡೆಸಬೇಕಾಗಿತ್ತು. ಈ ಬಗ್ಗೆ ನೀವು ನಿಮ್ಮ ಹಕ್ಕನ್ನು ಚಲಾವಣೆ ಮಾಡಬೇಕು.

ಅಧ್ಯಕ್ಷರು.—ಇಲ್ಲಿ ಎಲ್ಲರಿಗೂ ಇರುವಂತ ಹಕ್ಕುಗಳನ್ನು ನಮ್ಮ ನೀತಿ ನಿಯಮಗಳ ಚೌಕಟ್ಟಿನಲ್ಲಿ ಚಲಾವಣೆ ಮಾಡಬೇಕಾಗುತ್ತದೆ. ನೀವು ನೋಟೀಸ್ ಕೊಟ್ಟಿದ್ದೀರಿ. ಅದನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಈಗ ಅವಕಾಶ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಮೊದಲು ನಾನು ಹೇಳುವುದನ್ನು ಸಹ ಕೇಳಿ.

ಅಧ್ಯಕ್ಷರು.—ಈಗ ನೀವು ಏನು ಹೇಳಿದರೂ ಸಹ ಅದು ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಬಿ ಜಿ. ಕೊಟ್ರಪ್ಪ. ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಏನೆಂದರೆ, ಬೆಳಿಗ್ಗೆ ಈ ವಿಚಾರ ಇಲ್ಲಿ ಪ್ರಸ್ತಾಪಕ್ಕೆ ಬಂದಾಗ ಆಡಳಿತ ಪಕ್ಷದವರನ್ನು ಕೇಳಿ ಹೇಳುತ್ತೇನೆ ಎಂದು ಹೇಳಿದಿರಿ. ಈಗ ತಾವು ಇದರ ಬಗ್ಗೆ ತಮ್ಮ ರೂಲಿಂಗ್‌ನ್ನು ಕೊಟ್ಟಿದ್ದೀರಿ. ಆದರೆ ಇದು ರೂಲಿಂಗ್ ಅಲ್ಲ ಎಂದು ಅವರು ಹೇಳುತ್ತಿದ್ದಾರೆ. ಇದು ಅಸಮಾಧಾನ ಪಡುವ ವಿಷಯವಾಗಿದೆ. ರೂಲಿಂಗ್ ಕೊಟ್ಟಮೇಲೂ ಅದು ರೂಲಿಂಗ್ ಅಲ್ಲ ಎಂದು ಇಲ್ಲಿ ಅಸಂಬದ್ಧವಾದ ಶಬ್ದಗಳನ್ನು ಬಳಸುವುದು ಸರಿಯಲ್ಲ. ತಾವು ಒಂದು ಸಲ ತೀರ್ಮಾನ ಕೊಟ್ಟಮೇಲೆ ಅದನ್ನು ಜಾರಿಗೆ ತರಬೇಕು ಮತ್ತು ಮುಂದಿನ ವಿಷಯಕ್ಕೆ ಹೋಗಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಂಖ್ಯವಾಗಿ ಈ ಸಭೆ ವಿಶ್ವಾಸಯುತವಾಗಿ ನಡೆಯಬೇಕು ವಿರೋಧ ಪಕ್ಷದ ನಾಯಕರು ಈ ಬಗ್ಗೆ ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಾಗ ತಾವು ಮುಂಖ್ಯ ಮಂತ್ರಿಗಳ ಜೊತೆಗೆ ಮತ್ತು ವಿರೋಧ ಪಕ್ಷದ ನಾಯಕರುಗಳ ಜೊತೆಗೆ ಮಾತುಕತೆ ನಡೆಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿತ್ತು ಆದರೆ ಈಗ ತಾವು ಇದರ ಮೇಲೆ ಈಗ ಚರ್ಚೆಗೆ ಅವಕಾಶವಿಲ್ಲ ಇದನ್ನು ನಿಯಮ ೬೮ರ ಪ್ರಕಾರ ನಾ ಚರ್ಚೆಗೆ ತೆಗೆದುಕೊಳ್ಳುವುದಾಗಿ ಹೇಳಿದ್ದೀರಿ. ಈ ದಿನವೇ ಚರ್ಚೆಗೆ ಏತಕ್ಕೆ ತೆಗೆದುಕೊಳ್ಳಬಾರದು . ಮಾನ್ಯ ಮಂಖ್ಯ ಮಂತ್ರಿಗಳಿಗೆ ಮತ್ತು ಮಾನ್ಯ ಗೃಹ ಮಂತ್ರಿಗಳಿಗೆ ಅಂತಹ ಮಹತ್ತರವಾದ ಕೆಲಬೇರೆ ಏನಿದೆ ? ಈ ಸಭೆಗೆ ಮೊದಲು ಗೌರವ ಕೊಡಬೇಕು. ವಿರೋಧ ಪಕ್ಷದವರು ಇದು ಅ ಮಂಹತ್ವವಾದ ವಿಷಯವೆಂದು ತಿಳಿದುಕೊಂಡು ನಿಲುವಳಿ ಸೂಚನೆ ತಂದಾಗ, ಆದರ ಚರ್ಚೆಗೆ ಆಡಳಿತ ಪಕ್ಷದವರು ಅವಕಾಶ ಮಾಡಿಕೊಡಬೇಕಾಗುತ್ತದೆ. ಸತ್ಯದ ಸಂಗತಿಗಳನ್ನು ಇಲ್ಲಿ ಹೇಳಲು ಕೂಡಲೇ ಅವಕಾಶ ಮಾಡಿಕೊಡಬೇಕೇ ಹೊರತು ನಾಳೆ ಇಲ್ಲವೇ ನಾಡಿದ್ದು ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳುವುದು ಸರಿಯಲ್ಲ. ಇದು ೨-೩ ತಿಂಗಳುಗಳ ಹಿಂದೆ ನಡೆದಿರುವ ಘಟನೆ ಇಂತಹ ಅನೇಕ ಅಮಾನುಷ ಘಟನೆಗಳು ನಮ್ಮ ರಾಜ್ಯದಲ್ಲಿ ನಡೆದಿವೆ. ಇಂತಹ ಘಟನೆಗಳ ಬಗ್ಗೆ ಈ ಸದನದಲ್ಲಿ ವಿರೋಧ ಪಕ್ಷದವರು ಚರ್ಚೆ ಮಾಡದಿದ್ದರೆ ನಾಳೆ ಈ ರಾಜ್ಯದ ಜನತೆಗೆ ನಾವು ಉತ್ತರ ಕೊಡುವುದೂ ಕಷ್ಟವಾಗುತ್ತದೆ. ಇನ್ನಿ ನಾವು ಯಾವುದಕ್ಕೆ ಮೊದಲು ಪ್ರಾಶಸ್ತ್ಯ ಕೊಡಬೇಕು ಎನ್ನುವುದು ಮುಖ್ಯವಾದುದು. ಇವೊತ್ತು ನಾವು ಎಲ್ಲಾ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ ಅಡ್ಜರ್ನ್‌ಮೆಂಟ್ ಮೋಷನ್ನಿನ ಮೇಲೆ ಚರ್ಚೆ ಆಗಬೇಕು ಎಂದು ಮಾನ್ಯ ಮಾಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಗೃಹ ಸಚಿವರನ್ನು ಸದನಕ್ಕೆ ಕರೆಯಿಸಿ. ಇದರ ಬಗ್ಗೆ ಚರ್ಚೆ ಪ್ರಾರಂಭವಾಗಲಿ, ಹೀಗೆಯೇ ಎಳೆದುಕೊಂಡು ಹೋಗುವುದು ಸರಿಯಲ್ಲ.

ಅಧ್ಯಕ್ಷರು.—ಇದರ ಬಗ್ಗೆ ನಾಳೆ ಚರ್ಚೆ ಮಾಡಿರಿ. ಈಗ ಬಿಲ್ಸ್ ತೆಗೆದುಕೊಳ್ಳೋಣ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ ನಾವು ರೂಲಿಂಗನ್ನು ವಿರೋಧ ಮಾಡುತ್ತಾ ಇಲ್ಲ. ಆದಕ್ಕೆ ನಾವು ಗೌರವ ಕೊಟ್ಟಿದ್ದೇವೆ. ನಿಮ್ಮ ಸ್ವಂತ ಕಾರಣಕ್ಕಲ್ಲ, ಕಾರ್ಯಕಲಾಪದ ದೃಷ್ಟಿಯಿಂದ ಹೀಗೆ ಆಗಬೇಕು ಎಂದು ತಾವು ಹೇಳುತ್ತಿದ್ದೀರಿ. ಮಾನ್ಯ ಗೃಹ ಸಚಿವರು ದಲಿತರ ಮೇಲೆ ನಡೆದ ಪ್ರಕರಣದ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ ಎಂದು ಕಾಗದ ಬರೆದಿದ್ದಾರೆ ಎಂದು ಹೇಳಿದಿರಿ.....

ಅಧ್ಯಕ್ಷರು.—ಮಾಹಿತಿ ಇಲ್ಲ ಎಂದಲ್ಲ ತರಿಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾವು ಹೇಳುವುದನ್ನು ಸ್ವಲ್ಪ ಕೇಳಿ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. ನಾಳೆ ಇದಕ್ಕೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು.—ನೋಟೀಸಿನಲ್ಲಿ ಸ್ಪೆಸಿಫಿಕ್ಕಾಗಿ, ಡೆಫಿನಿಟ್ಟಾಗಿ ಕೊಟ್ಟಿಲ್ಲ. ಜನರಲ್ಲಾಗಿ ಕೊಟ್ಟಿದ್ದೀರಿ ಅನ್ಯ ಗೃಹ ಮಂತ್ರಿಗಳು ಮಾಹಿತಿ ತರಿಸಿಕೊಳ್ಳಬೇಕು ಎಂದು ಹೇಳಿದ್ದುದು ಯೋಗ್ಯವಿದೆ.

Sri K. H. Srinivas.—In fact it is very highly improper on the part of the Home Minister to make such a statement. ರಾಜ್ಯದ ಗೃಹ ಮಂತ್ರಿಯಾಗಿ ಇದರ ಬಗ್ಗೆ ಮಾಹಿತಿ ಇಲ್ಲ ಅಂದರೆ ಏನರ್ಥ. ನಾವು ಬೇರೆ ಯಾವುದೋ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕೇಳಿದಾಗ ಸ್ಪಾಟ್‌ನಲ್ಲಿ ಮಾಹಿತಿ ಕೊಡುವುದಕ್ಕೆ ಸಾಧ್ಯವಾಗದಿರಬಹುದು. ಆಗ ಅವರು ಟೈಂ ತೆಗೆದುಕೊಳ್ಳಲಿ. ಆದರೆ ಇಂತಹ ವಿಷಯಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ...

(ಗೊಂದಲ)

Mr. Speaker.—Nothing will go on record.

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರೇ. ನಿಮ್ಮ ನೋಟೀಸನ್ನು ನೋಡಿ. ಅದರಲ್ಲಿ ಸ್ಪೆಸಿಫಿಕ್ಕಾಗಿ ಇಲ್ಲ, ಡೆಫನೆಟ್ಟಾಗಿಲ್ಲ, ಜನರಲ್ಲಾಗಿ ಹೇಳಿದ್ದೀರಿ.

(ಗೊಂದಲ)

ಶ್ರೀ ಕೆ ಹೆಚ್. ಶ್ರೀನಿವಾಸ್.—ಮಾನ್ಯ ಗೃಹ ಮಂತ್ರಿಗಳು ಬಂದು ಕುಳಿತುಕೊಳ್ಳಲಿ, ನಾವು ಹೇಳುತ್ತೇವೆ.

ಅಧ್ಯಕ್ಷರು.—೧೦ ಏಕೆ ೨೦ ಇನ್‌ಸ್ಪೆನ್ಸ್ ಹೇಳಿ, ಅವರು ಮಾಹಿತಿ ತರಿಸಿಕೊಳ್ಳುತ್ತಾರೆ.

(ಗೊಂದಲ)

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ನಾಳೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ರೆಕಾರ್ಡ್ ಇರಲಿ ಅಧ್ಯಕ್ಷರೆ.....

ಅಧ್ಯಕ್ಷರು.—ಈ ವಿಷಯ ಮುಕ್ತಾಯವಾಗಿದೆ. ಈಗ ಬಿಲ್ಸ್ ತೆಗೆದುಕೊಳ್ಳೋಣ. ಬಿಲ್ ಮೇಲೆ ಡಾ| ತಿಮ್ಮೇಗೌಡರು ಮಾತನಾಡಲಿ.

ಶ್ರೀ ಜಿ.ಎಂ. ಕಾನಡೆ.—ರಾಜ್ಯದಲ್ಲಿ ಆಗಿರುವ ಅನ್ಯಾಯಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ, ಆದರೆ ಇಲ್ಲಿ ಏನು ಆಗುತ್ತಿದೆ ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇದು ನಮಗೆ ಮಾಡಿದ ಶಾಸ್ತ್ರಿ. ನಾವು ಈ ಸೂಚನೆಯನ್ನು ಕೊಟ್ಟು ಚರ್ಚೆ ಮಾಡಬೇಕು ಎಂದು ಹೇಳಿದಾಗ ಅದನ್ನು ನಿಯಮ ೬೮ರ ಕೊಳಗೆ ತೆಗೆದುಕೊಳ್ಳೋಣ ಎಂದು ಹೇಳಿದಿರಿ, ನಾವು ಕೇಳಿದೆವು. ನೀವು ತಕ್ಕಡಿಯನ್ನು ಕರೆಕ್ಟಾಗಿ ಹಿಡಿಯುವವರು.

(ಗೊಂದಲ)

ಅಧ್ಯಕ್ಷರು.—ರಾತ್ರಿಯೆಲ್ಲಾ ರಾವಣಾಯಣ ಕೇಳಿ ಬೆಳಿಗ್ಗೆ ರಾಮನಿಗೂ ಸೀತೆಗೂ ಏನಾಗಬೇಕು ಎಂದು ತಾವು ಕೇಳಿದಹಾಗೆ ಆಯಿತು.

ಶ್ರೀ ಎಸ್. ಬಂಗಾರಪ್ಪ.—ರಾಮು ಸೀತೆ ಕಥೆಯನ್ನು ನಿಮಗೆ ನಾವು ಹೇಳಬೇಕಾಗುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ. ಇಲ್ಲಿಯವರೆಗೆ ಶಾಂತರೀತಿಯಲ್ಲಿ ಸಭೆ ನಡೆದು ಈಗ ಕಲುಷಿತ ವಾತಾವರಣಕ್ಕೆ ಬರುವುದು ಬೇಡ. ತಾವು ಮುಂಜಾನೆ ಮೂರು ಗಂಟೆಗೆ ಇದನ್ನು

ತೆಗೆದುಕೊಳ್ಳೋಣವೆಂದು ಹೇಳಿದ್ದುದು ನಿಜ. ಈಗ ಮಾನ್ಯ ಮುಖ್ಯ ಮಂತ್ರಿಗಳು ಅನಾಯಾಸವಾಗಿ ಬಂದಿದ್ದಾರೆ. ನಾವು ಈ ಬಿಲ್‌ನ್ನು ಪಾಸು ಮಾಡೋಣ, ಬಿಲ್ ಆದ ನಂತರ ಒಬ್ಬರೋ ಇಬ್ಬರೋ ಇದರ ಬಗ್ಗೆ ಭಾಷಣ ಪ್ರಾರಂಭಿಸಲಿ. ನಾಳೆ ಮುಂಜಾನೆ ಇದನ್ನು ಮಂತ್ರಿ ಮುಂದುವರಿಸೋಣ. ಈ ಸದನದ ನಾಯಕರು ಇದಕ್ಕೆ ಅವಕಾಶ ಮಾಡಿ ಕೊಡಲಿ, ಸತ್ಸಂಪ್ರದಾಯವನ್ನು ಇಲ್ಲಿ ಬೆಳೆಸೋಣ. ಇವತ್ತು ನಾವು ವಿಚಾರ ಮಾಡುವಂಥಾದ್ದು ಅವರ ಪಕ್ಷಕ್ಕೆ ಸೇರಿದ ಮಾನ್ಯ ತಿಪ್ಪೇಸ್ವಾಮಿಯವರು ಕೊಟ್ಟಂಥ ರಿಪೋರ್ಟ್‌ನ ಮೇಲೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ...

ಶ್ರೀ ಜಿ.ಎಂ. ಕಾನಡೆ.— ಸ್ವಾಮಿ, ಇವರಿಗೆ ಕಳಿತರೂ ರೂಲ್ಸ್, ನಿಂತರೂ ರೂಲ್ಸ್. ಹರಿಜನರಿಗೆ ಮಂಲ ತಿನ್ನಿಸಿದ್ದು ಯಾವ ರೂಲ್ಸ್‌ನಲ್ಲಿ. ನಮ್ಮ ರೂಲ್ಸ್‌ನ್ನು ಬೆಂಕಿಗೆ ಹಾಕಿರಿ, ಮೊದಲು ಇದನ್ನು ಚರ್ಚೆಗೆ ತೆಗೆದುಕೊಳ್ಳಿ.

(ಹತ್ತಾರು ಜನ ಸದಸ್ಯರುಗಳು ಒಟ್ಟಿಗೆ ನಿಂತು ಮಾತನಾಡಿದರು)

ಅಧ್ಯಕ್ಷರು. —ನೀವು ಮಾತನಾಡಿದ್ದುದು ಯಾವುದೂ ರೆಕಾರ್ಡ್ ಆಗುವುದಿಲ್ಲ.

(ರೆಕಾರ್ಡ್ ಮಾಡಕೂಡದೆಂದು ತಿಳಿಸಲಾಯಿತು)

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಿಮ್ಮ ಸದಸ್ಯರಿಗೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಲು ಟ್ರೈನಿಂಗ್ ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ಈಗ ತಾವು ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದ ಕೆ.ಹೆಚ್. ಪಾಟೀಲರು ಹೇಳಿದ್ದನ್ನು ಎಲ್ಲರೂ ಕೇಳಿದ್ದೇವೆ. ಈಗ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ...

(ಗೊಂದಲ)

ಅಧ್ಯಕ್ಷರು.—ಯಾರು ಎಷ್ಟು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರಾದ ಪಾಟೀಲ್‌ರವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಹೇಳಲಿಲ್ಲ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಪಾಟೀಲ್‌ರವರು ಯಾವುದೇ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಹೇಳಲಿಲ್ಲ. ಅವರು ಮನವಿ ಮಾಡಿಕೊಂಡರು.

(ಗೊಂದಲ)

ಅಧ್ಯಕ್ಷರು.—ಸರ್ಕಾರದವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಎಂ. ವೀರ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಅವರ ಪಾಯಿಂಟ್ ಆಫ್ ಆರ್ಡರ್ ಇದ್ದರೆ ಹೇಳಲಿ.

(ಗೊಂದಲ)

ಅಧ್ಯಕ್ಷರು.—ಈಗ ಯಾರು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ಇದೇ ರೀತಿ ಹೇಳುವುದಾದರೆ ನಾನು ಮುಂದಿನ ವಿಷಯಕ್ಕೆ ಹೋಗಬೇಕಾಗುತ್ತದೆ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾಮತ್.—ಮಾನ್ಯ ಸಭಾನಾಯಕರು ಉತ್ತರ ಹೇಳಲಿ.

(ಗೊಂದಲ)

ಅಧ್ಯಕ್ಷರು.—ಈಗ ನಾನು ಮಾನ್ಯ ಮಂತ್ರಿಗಳಿಗೆ ಉತ್ತರ ಹೇಳಲಿಕ್ಕೆ ಕರೆದಿದ್ದೇನೆ, ಅವರ ಉತ್ತರವನ್ನು ಕೇಳೋಣ.

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ.—ಅಧ್ಯಕ್ಷರೆ, ಅವರು ಇದನ್ನು ಮಾಡಲಿಕ್ಕೆ ಬರುವುದಿಲ್ಲ ಎಂದರಿ ರೂಲ್ ಓದುತ್ತಾರೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕೋ ಅಥವಾ ನಾನು ಮುಂದಿನ ವಿಷಯಕ್ಕೆ ಹೋಗಬೇಕೋ ?

(ಗೊಂದಲ)

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳಲಿ.

(ಗೊಂದಲ)

ಅಧ್ಯಕ್ಷರು.—ಕೇಳುವ ಹಕ್ಕು ನಿಮಗೆ ಇದೆ. ಅದೇರೀತಿ ಹೇಳುವ ಹಕ್ಕು ಅವರಿಗೂ ಇದೆ. ಇಬ್ಬರಿಗೂ ಆ ಹಕ್ಕು ಇದೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಕೆ. ಹೆಚ್. ಪಾಟೀಲ್‌ರವರು ಮಾಡಿರುವುದನ್ನು ಪುರಸ್ಕಾರವನ್ನಾದರೂ ಮಾಡಲಿ, ತಿರಸ್ಕಾರವನ್ನಾದರೂ ಮಾಡಲಿ, ನಮಗೆ ಸಂತೋಷ. ಆದರೆ ಮಾನ್ಯ ಲಕ್ಷ್ಮೀಸಾಗರ್‌ರವರು ನಮಗೆ ರೂಲ್ಸ್ ಪಾಠ ಮಾಡುವುದು ಬೇಡ.

(ಗೊಂದಲ)

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾನು ಬಹಳ ನೊಂದುಕೊಂಡು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ್‌ರವರು ಬಹಳ ಬುದ್ಧಿವಂತರು. ಆದರೆ ಅವರ ಅತಿ ಬುದ್ಧಿವಂತಿಕೆ ಇಲ್ಲಿ ಬೇಡ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನೀವು ಅತಿ ಬುದ್ಧಿವಂತಿಕೆ ಮಾಡಿಕೊಂಡು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದುದು ಗೊತ್ತಿದೆ. ನಿಮ್ಮ ಬುದ್ಧಿವಂತಿಕೆ ಇಡೀ ಕರ್ನಾಟಕಕ್ಕೇ ಗೊತ್ತಾಗಿದೆ.

(ನಗು)

ಶ್ರೀ ರಾಮಕೃಷ್ಣ ಹೆಗಡೆ.–ಮಾನ್ಯ ಅಧ್ಯಕ್ಷರೆ, ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಇವತ್ತು ಚರ್ಚೆ ಆಗಲೇಬೇಕೆಂದು ಅವರು ಹೇಳುವುದಾದರೆ, ಈಗಲೇ ಶುರು ಮಾಡಲಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.–ಈ ಚರ್ಚೆ ಇವತ್ತೇ ಮುಕ್ತಾಯ ಆಗಬೇಕು.

ಶ್ರೀ ಎಸ್. ಬಂಗಾರಪ್ಪ.–I am sorry. ಇದು ಆಗುವುದಿಲ್ಲ ..

ಶ್ರೀ ಎ. ಲಕ್ಷ್ಮೀಸಾಗರ್.–ಮಾನ್ಯ ಅಧ್ಯಕ್ಷರೆ...

ಶ್ರೀ ಎಸ್. ಬಂಗಾರಪ್ಪ.–ಮಾನ್ಯ ಅಧ್ಯಕ್ಷರೆ, ಮಾನ್ಯ ಲಕ್ಷ್ಮೀಸಾಗರ್‌ರವರು ರೂಲ್ ೬೮ನ್ನು ಓದಂತ್ತಾರೆಂದು ನನಗೆ ಗೊತ್ತಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.–ಮಾನ್ಯ ಅಧ್ಯಕ್ಷರೆ, ಇವತ್ತೇ ಚರ್ಚೆ ಮುಕ್ತಾಯವಾಗಬೇಕೆಂದು ಮಾನ್ಯ ಸಭಾನಾಯಕರು ಹೇಳುತ್ತಿದ್ದಾರೆ ಈ ವಿವರಗಳನ್ನು ತರಿಸುವುದಕ್ಕೆ ಪತ್ರ ಬರೆದಿದ್ದೇನೆಂದು ಮಾನ್ಯ ಗೃಹ ಸಚಿವರು ಹೇಳಿದ್ದಾರೆ, ಆ ಉತ್ತರ ಬರಲಿ. ಆದರೆ ಇವತ್ತು ಚರ್ಚೆ ಪ್ರಾರಂಭವಾಗಿ ಉತ್ತರ ನಾಳೆ ಆಗಲಿ.

ಶ್ರೀ ರಾಮಕೃಷ್ಣ ಹೆಗಡೆ.–ಈ ಚರ್ಚೆ ನಡೆಯುವಾಗ ಎಷ್ಟು ವಿವರಗಳನ್ನು ತರಿಸುವುದಕ್ಕೆ ಸಾಧ್ಯವೋ ಅಷ್ಟನ್ನೂ ತರಿಸುತ್ತಾರೆ. ಚರ್ಚೆ ಇವತ್ತು ಆಗಬೇಕಾದರೆ ಉತ್ತರವೂ ಇವತ್ತೇ ಆಗಬೇಕು.

ಶ್ರೀ ಎಸ್. ಬಂಗಾರಪ್ಪ.–ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನೂ ನಾನು ತಮ್ಮ ಮುಖಾಂತರ ಸಭೆಯ ಮುಂದಿಡಬೇಕಾಗುತ್ತದೆ. ಉತ್ತರ ತರಿಸುವುದಕ್ಕೆ ನಾಳೆವರೆಗೆ ಕಾಲಾವಕಾಶ ಬೇಕಾಗುತ್ತದೆಂದು ಹೇಳಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.–ಮಾನ್ಯ ಅಧ್ಯಕ್ಷರೆ, ಇವತ್ತೆ ಚರ್ಚೆಯಾಗಲಿ. ನಾನು ಆದಕ್ಕೆ ಸಿದ್ಧ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.–ಮಾನ್ಯ ಅಧ್ಯಕ್ಷರೆ, ಅವರದ್ದು ವಿತ್ತಂಡವಾದ ಇದರ ಪರಮಾವಧಿ ಆಯಿತು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.–ವಿತ್ತಂಡವಾದದ ಪರಮಾವಧಿ ಏನೂ ಇಲ್ಲ. ನಾಳೆ ಉತ್ತರ ಕೊಡುವುದಾದರೆ...

(ಗೊಂದಲ)

ಅಧ್ಯಕ್ಷರು.–ಮಾನ್ಯ ಗೃಹ ಮಂತ್ರಿಗಳು ಹೇಳಿದ್ದಾರೆ, ನಾಳೆ ಚರ್ಚೆ, ನಾಳೆ ಉತ್ತರ ಆಗಲಿ, ಇವತ್ತು ಚರ್ಚೆ ಪ್ರಾರಂಭವಾಗಬೇಕೆಂದು ನೀವು ಹೇಳುತ್ತಿದ್ದೀರಿ. ಇವತ್ತೆ ಚರ್ಚೆ, ಇವತ್ತೆ ಉತ್ತರವೂ ಆಗಬೇಕೆಂದು ಮಾನ್ಯ ಸಭಾ ನಾಯಕರು ಹೇಳಿದ್ದಾರೆ. ಆದ್ದರಿಂದ ತಮಗೆ ನಾಳೆ ಉತ್ತರ ಬೇಕಾದರೆ, ನಾಳೆಯೇ ಚರ್ಚೆ. ಇಲ್ಲದಿದ್ದರೆ ಇವತ್ತೇ ಚರ್ಚೆಯಾಗಬೇಕೆಂದು ಹೇಳುವುದಾದರೆ ಇವತ್ತೇ ಉತ್ತರ, ಆದ್ದರಿಂದ ಇವತ್ತೇ ಚರ್ಚೆ, ಇವತ್ತೇ ಉತ್ತರ. ಇಲ್ಲದಿದ್ದರೆ ನಾಳೆ ಚರ್ಚೆ, ನಾಳೆಯೇ ಉತ್ತರ. ನಿಮಗೆ ಯಾವುದು ಬೇಕು ಹೇಳಿ ?

ಶ್ರೀ ಎ. ಲಕ್ಷ್ಮೀಸಾಗರ್.–ಮಾನ್ಯ ಅಧ್ಯಕ್ಷರೇ ಇಲ್ಲಿಯವರೆಗೂ ಸನ್ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು, ವಿರೋಧ ಪಕ್ಷದ ಹಿರಿಯ ಸದಸ್ಯರು ಇವೊತ್ತೇ ಚರ್ಚೆಯಾಗಬೇಕೆಂದು. ಇದು ಒಂದು ಬಹಳ ಪ್ರಮುಖವಾದ ಚರ್ಚೆ, ಐದೂರು ಗಂಟೆಯಿಂದ ಮಾನ್ಯ ಗೃಹ ಸಚಿವರು ಇರುತ್ತಾರೆ, ಅವರು ಉತ್ತರವನ್ನು ಕೊಡುತ್ತಾರೆನ್ನುವ ಮಾತನ್ನು ಬಲವಾಗಿ ವಾದದ ಮುಖ್ಯ ವಸ್ತುವನ್ನಾಗಿ

ಉಪಯೋಗಿಸಿಕೊಂಡು ಈವೊತ್ತೇ ಚರ್ಚೆಯಾಗಬೇಕೆಂದು ಹೇಳಿದ್ದಾರೆ. ಇಷ್ಟರವರೆಗೂ ತಾವು ಏನು ಹೇಳಿದ್ದೀರಿ, ಮಾನ್ಯ ವಿರೋಧಪಕ್ಷದ ಸದಸ್ಯರು ತಮ್ಮ ಅಭಿಪ್ರಾಯಂ ಏನು ಹೇಳಿದ್ದಾರೆ ಎನ್ನುವುದನ್ನೆಲ್ಲಾ ಕೇಳಿದ್ದೇನೆ. ಆದ್ದರಿಂದ ನಾನು ನನ್ನ ಅಭಿಪ್ರಾಯವೇನು ಎನ್ನುವುದನ್ನು ತಿಳಿಸಿದರೆ ಅತಿಶಯೋಕ್ತಿಯಾಗಲಾರದು. ಅವರ ಖಾತರಿ ಏನು ? ಈ ಸರ್ಕಾರಕ್ಕೆ ಹರಿಜನ ಮತ್ತಿತರ ಹಿಂದುಳಿದ ಮತ್ತು ಕಷ್ಟಕ್ಕೆ ಸಿಕ್ಕಿಕೊಂಡಿರತಕ್ಕಂಥ ಜನರ ಬಗ್ಗೆ ಕಾಳಜಿ ಇಲ್ಲ, ಕಾಳಜಿ ಇದ್ದರೆ ಈವತ್ತೆ ಚರ್ಚೆಯನ್ನು ಮಾಡಲಿ ಎನ್ನುವ ಮಾತನ್ನು ಮಾನ್ಯ ನಂಜಯ್ಯನಮಠ್‌ರವರೂ ಕೂಗಿ ಕೂಗಿ ಹೇಳಿದ್ದಾರೆ. ಅದಕ್ಕೆ ಸನ್ಮಾನ್ಯ ಸಭಾನಾಯಕರು ಇವೊತ್ತೆ ಚರ್ಚೆಯಾಗಲಿ, ಇವೊತ್ತೆ ಇದು ಮುಗಿಯಲಿ ಎಂದು ಹೇಳಿದ್ದಾರೆ. ರೂಲ್ ನಂಬರ್ ೬೯ರ ಪ್ರಕಾರ ಒಂದು ಗಂಟೆ ಎಂದು ಇದೆ. ಆದರೆ ನಿಯಮಾವಳಿಗಳೇ ಬೇಡ, ನಿಯಮಾವಳಿಗಳಿಗೆ ಬೆಂಕಿಯನ್ನು ಹಚ್ಚಿಬಿಡಿ ಎಂದು ಸನ್ಮಾನ್ಯ ಕಾನಡೆಯವರು ಹೇಳಿದರು. ಅವರು ಬೆಂಕಿಯನ್ನು ತಮ್ಮ ಕೈಯ ಹತ್ತಿರದಲ್ಲಿಯೇ ಇಟ್ಟುಕೊಂಡಿರತಕ್ಕಂಥ ಸದಸ್ಯರು. ವಿಚಾರಧಾರೆಯನ್ನು ಮುಖ್ಯವಾಗಿ ಇಟ್ಟುಕೊಂಡಿರತಕ್ಕಂಥವರು ನಾವು ಬೆಂಕಿಯನ್ನು ಹತ್ತಿರ ಇಟ್ಟುಕೊಂಡಿರತಕ್ಕಂಥ ಜನ ನಾವಲ್ಲ. ದಲಿತರ ಬಗ್ಗೆ ಅವರಿಗಿಂತಲೂ ಹೆಚ್ಚಿನ ಕಾಳಜಿಯನ್ನು ಇಟ್ಟುಕೊಂಡಿರುತ್ತೇವೆ. ಕಾಳಜಿ ಕಡಿಮೆ ಏನು ಇಲ್ಲವೆನ್ನುವ ಮಾತನ್ನು ಬಹಳ ವಿನಯದಿಂದ ಅವರಿಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಆದರೆ ಒಂದು ಗಂಟೆಯ ಸಮಯದಲ್ಲಿಯೇ ಇದು ಮುಗಿಯಬೇಕೆಂದು ರೂಲ್ ಇದೆ. ಸನ್ಮಾನ್ಯ ಅಧ್ಯಕ್ಷರೇ ತಾವು ಹೇಳಿದಹಾಗೆ ಉತ್ತರ ಇವತ್ತೇ ಆಗಬೇಕಾದರೆ. ಚರ್ಚೆಯೂ ಕೂಡ ಈಗಲೇ ಆಗಬೇಕು. ಇವೊತ್ತು ಆಗುವುದಿಲ್ಲವೆಂದು ಹೇಳುವುದಾದರೆ ನಾಳೆ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಆ ಕಡೆ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡುವವರಿದ್ದಾರೆ, ಈ ಕಡೆಯು ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ಏಕೆಂದರೆ ಇದು ಬಹಳ ಇಂಟರೆಸ್ಟಿಂಗ್ ಸಬ್ಜಕ್ಟ್ ಇರುತ್ತದೆ. ಆದ್ದರಿಂದ ಇದನ್ನು ನಾಳೆಯದಿವಸ ಇಟ್ಟುಕೊಳ್ಳೋಣವೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಚರ್ಚೆಗೆ ನಾವು ಸಿದ್ಧರಾಗಿದ್ದೇವೆ. ಉತ್ತರಕ್ಕೆ ಅವರು ಸಿದ್ಧರಾಗಬೇಕು.

೪-೦೨ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ.....

ಅಧ್ಯಕ್ಷರು. —ಒಂದು ಗಂಟೆ ಅವಧಿಯಲ್ಲಿ ಚರ್ಚೆ ಮತ್ತು ಉತ್ತರ ಎರಡೂ ಮುಗಿಯಬೇಕು.

ಶ್ರೀ ವಿ. ಲಕ್ಷ್ಮೀಸಾಗರ್.—ಅದು ತಮ್ಮ ಡಿಸ್ಕ್ರಿಪ್ಷನ್‌ಗೆ ಬಿಟ್ಟಿದ್ದಾದು. ಹೆಚ್ಚು ಸಮಯ ಕೊಟ್ಟರೆ ನಾವೇನು ತಕರಾರು ಮಾಡುವುದಿಲ್ಲ. ಆದರೆ ಇವತ್ತೇ ಚರ್ಚೆ ಉತ್ತರ ಎಲ್ಲ ಮುಕ್ತಾಯವಾಗಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಲಕ್ಷ್ಮೀಸಾಗರ್‌ರವರು ಸಲಹೆ ಮಾಡಿ ಇವತ್ತೇ ಚರ್ಚೆಯನ್ನು ಪ್ರಾರಂಭಿಸಿ ಇವತ್ತೇ ಕೊನೆ ಮಾಡಬೇಕೆಂದು ಹೇಳಿದ್ದಾರೆ, ಆದರೆ ನಾವು ನಿಮಗೆ ಸಹಾಯ ಮಾಡುತ್ತೇವೆ. ನಾಳೆ ಉತ್ತರ ಕೊಟ್ಟರೆ ಏನಾಗುತ್ತದೆ ?

ಅಧ್ಯಕ್ಷರು.—ಇವತ್ತಾದರೂ ತೆಗೆದುಕೊಳ್ಳಿ, ನಾಳೆಯಾದರೂ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ನನ್ನ ಪತ್ತಿರ ಇರುವ ಮಾಹಿತಿ ಪ್ರಕಾರ ನಿಮ್ಮ ಕಾಲದಲ್ಲಿ ಮಂತ್ರಿಯಾಗಿ ಏನೇನು ಮಾಡಿದ್ದೀರಿ ಎಂಬುದನ್ನೆಲ್ಲಾ ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಬಂದಮೇಲೆ ಏನೇನು ಮಾಡಿದ್ದೀರೆಂಬುದನ್ನು ನಾವು ಹೇಳುತ್ತೇವೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಚರ್ಚೆ ಉತ್ತರ ಕೊಡಿಯೇ ಆಗಬೇಕು. ಇಲ್ಲದಿದ್ದರೆ ನಾಳೆ ತೆಗೆದುಕೊಳ್ಳಬೇಕು. ಇವತ್ತು ಚರ್ಚೆಯಾಗಿ ನಾಳೆ ಉತ್ತರ ಎಂದರೆ ಆಗುವುದಿಲ್ಲ. ಎರಡೂ ಇವತ್ತೇ ಮುಗಿಯಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಲುವಳಿ ಸೂಚನೆಗೆ ೧೫ ಮಂದಿ ಸಹಿ ಹಾಕಿ ಕೊಟ್ಟಿದ್ದೇವೆ.

ಅಧ್ಯಕ್ಷರು.—ರೂಲ್ ೬೮ರ ಪ್ರಕಾರ ಒಂದು ತಾಸಿನಲ್ಲಿ ಇದು ಮುಗಿಯಬೇಕೆಂದು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ರೂಲ್ ೬೮ರ ಪ್ರಕಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು.—ಈಗ ೫ ಗಂಟೆಗೆ ಸಭೆ ಮುಗಿಯಬೇಕು. ನಾಳೆ ಅರ್ಧ ಗಂಟೆ ಹೆಚ್ಚು ಕಡಿಮೆ ಅವರು ನೀವು ಒತಾತನಾಡಿ. ಇವತ್ತೇ ತೆಗೆದುಕೊಳ್ಳಬೇಕೆಂದರೆ ೫ ಗಂಟೆಗೆ ಮುಗಿಯಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊಟ್ಟಮೊದಲನೆಯಂದಾಗಿ ತಮಗೆ ಅಭಿನಂದಿಸುತ್ತೇನೆ.

ಅಧ್ಯಕ್ಷರು.—ಸರ್ಕಾರಕ್ಕೆ ಅಭಿನಂದಿಸಿ. ಸರ್ಕಾರ ಒಪ್ಪಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಏನು ಹೇಳಿದಿರಿ ಅದಕ್ಕೆ ಅವರು ಮನ್ನಣೆ ಕೊಟ್ಟಿದ್ದಾರೆ. ಅದಕ್ಕಾಗಿ ತಮಗೆ ಅಭಿನಂದಿಸುತ್ತೇನೆ. ಅವರು ನಾಳೆ.....

ಅಧ್ಯಕ್ಷರು.—ನಾಳೆ ಮುಂದುವರಿಸುವ ಪ್ರಶ್ನೆಯೇ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕೆ. ಹೆಚ್. ಪಾಟೀಲರಿಗೆ ಅಭಿನಂದನೆ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ನಮ್ಮ ಪಕ್ಷದವರು ಇದ್ದಾರೆ. ನಾವು ದೊಡ್ಡ ಮನಸ್ಸು ಮಾಡಿ ಚರ್ಚೆ ಇಡಿ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ಅವರ ಸಲಹೆ ಪ್ರಕಾರ ಒಂದೇ ಒಂದು ಬಿಲ್ಲನ್ನು ಮುಗಿಸೋಣ. ಅದು ಬಹಳ ಸರಳವಾದುದಾಗಿದೆ. ಐದೇ ನಿಮಿಷದಲ್ಲಿ ಮುಗಿಯುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಅಮೆಂಡ್‌ಮೆಂಟ್ ಇದೆ.

ಅಧ್ಯಕ್ಷರು.—ಈಗ ಪ್ರಸ್ತಾವ ಏನೆಂದರೆ ; 'ಗ್ರಹಿಸಿದೆ' ಇಸವಿಯ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) (ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು.)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಗಳ ಪರ್ಯಾಲೋಚನೆ—ಖಂಡ 2, ಮತ್ತು 3,

ಶ್ರೀ ಕೆ. ಹೆಚ್. ಪಾಟೀಲ್.—ನಾನು ಒಂದು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದೇನೆ. ಅದನ್ನು ಈಗ ಸಭೆಯ ಮುಂದೆ ಮಂಡಿಸಬಯಸುತ್ತೇನೆ. ಅದು ಈ ರೀತಿ ಇದೆ :

"That at the end of Clause 2, the following words shall be added ;

"Or Krishi Vigyana Kendras or any Institutions recognised by the Government."

The amendment was proposed

ನನ್ನ ಈ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೆಂದು ಆಶಿಸುತ್ತೇನೆ.

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ತಿದ್ದುಪಡಿಯು ಉದ್ದೇಶ ವ್ಯವಸಾಯಗಾರರಿಗೆ ಅನುಕೂಲವಾಗುವಂತೆ ಸೈನ್ಸ್ ಅಂಡ್ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಸಲುವಾಗಿ ಯೂನಿವರ್ಸಿಟಿಗೆ ಅವಕಾಶ ಮಾಡಿಕೊಡಬೇಕೆಂಬುದಾಗಿದೆ. ಕೇಂದ್ರ ಸರ್ಕಾರದವರು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಇಂಥ ಕೇಂದ್ರ

ಗಳನ್ನು ತೆರೆದಿದ್ದಾರೆ. ವ್ಯವಸಾಯ ಇಲಾಖೆಯವರಿಗೆ ಅನುಕೂಲವಾಗುವಂತೆ ಸೈನ್ಸ್ ಲ್ಯಾಬರೇಟರಿ, ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿಗಳನ್ನು ತೆರೆದು ಸಹಾಯ ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ತಿದ್ದುಪಡಿಯಲ್ಲಿ ಸೂಚಿಸಿದ್ದೇನೆ. ಮಾನ್ಯ ಮಂತ್ರಿಗಳು ಇದನ್ನು ಒಪ್ಪುತ್ತಾರೆಂದು ಭಾವಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಒಪ್ಪುತ್ತೀರಾ ?

ಶ್ರೀ ಕೆ. ಬಿ. ಮಲ್ಲಪ್ಪ.—ಇಲ್ಲ.

ಅಧ್ಯಕ್ಷರು —ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.
ಪ್ರಸ್ತಾವ ಏನೆಂದರೆ :

"That at the end of Clause 2, the following words shall be added :

Or Krishi Vigyana Kendras or any Institutions recognised by the Government."

ತಿದ್ದುಪಡಿಯಂ ಬಿದ್ದುಹೋಯಿತಂ

CLAUSE-3

ಅಧ್ಯಕ್ಷರು —ಮಾನ್ಯ ಬಸವನಗೌಡ್ರು ಮತ್ತು ವೆಂಕರಾಮಯ್ಯನವರು ಹಾಗೂ ಪಾಟೀಲರು ತಿದ್ದುಪಡಿ ಸೂಚನೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಈಗ ತಿದ್ದುಪಡಿಗಳನ್ನು ಮಂಡಿಸಬೇಕು.

SRI R. VENKATARAMAIAH.—I beg to move :

"That in line 3 of Clause 2(itme xi) for the words "Agricultural Engineering and Research" the words "Agricultural Sciences and Research" shall be substituted."

The amendment was proposed

ಶ್ರೀ ಆರ್. ವೆಂಕಟರಾಮಯ್ಯ.—ಇದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಮತ್ತು ರಿಸರ್ಚ್ ಎನ್ನುವ ಬದಲು ಅಗ್ರಿಕಲ್ಚರಲ್ ಸೈನ್ಸಸ್ ಆಂಡ್ ರಿಸರ್ಚ್ ಎಂದು ಮಾಡಬೇಕೆಂದು ಹೇಳಿದ್ದೇನೆ. ಈ ರೀತಿ ಇದ್ದರೆ ಬ್ರಾಡ್ ಟರ್ಮ್ ಆಗುತ್ತದೆ. ಎಲ್ಲದಕ್ಕೂ ಅಪ್ಲೈ ಆಗುತ್ತದೆ. ಆದ್ದರಿಂದ ದಯವಾಡಿ ಒಪ್ಪಿಕೊಳ್ಳಬೇಕು.

MR. SPEAKER.—The question is :

"That in line 3 of Clause 2 (itme xi), for the words" Agricultural Engineering and Research", the words "Agricultral Sciences and Research" shall be substituted."

ತಿದ್ದುಪಡಿ ತಿರಸ್ಕೃತವಾಯಿತಂ

MR. SPEAKER.—Now, Sri Mallikarjuna M. Kharge can move his amendment to Clause 2.

SRI M. MALIKARAJUNA KHARGE.—I beg to move :

"That at the end of Clause2 , the following words shall be added :

"and also veterinary Hospitals, Roads and Bridges."

The Amendment was proposed

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಈಗಾಗಲೇ ಹೇಳಿದ್ದೇನೆ ಯೂನಿವರ್ಸಿಟಿಗೆ ಡೊನೇಷನ್ ಕೊಡುತ್ತೇವೆಂದು ಹೇಳಿದ್ದಾರೆ. ಅದರ ಜೊತೆಗೆ ವೆಟರ್ನರಿ ಹಾಸ್ಪಿಟಲ್ಸ್‌ಗೆ, ರೋಡ್ಸ್, ಮತ್ತು ಬ್ರಿಡ್ಜಸ್ ಇವನ್ನೂ ಸೇರಿಸಿದರೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER.— The question is :

"That at the end of the Clause 2, the following words shall be added :

"and also Veterinary Hospitals, Roads and Bridges."

ತಿದ್ದುಪಡಿಯು ಬಿದ್ದುಹೋಯಿತು

೨ ಮತ್ತು ೩ನೇ ಖಂಡಗಳು

ಅಧ್ಯಕ್ಷರು.—"೨ ಮತ್ತು ೩ನೇ ಖಂಡವು ವಿಧೇಯಕದ ಅಂಗವಾಗಿರಬೇಕು.....

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ನ್ನು ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು.—"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರತ್ತದೆ."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಕೆ. ಬಿ. ಮಲ್ಲಪ್ಪ —ಮಾನ್ಯ ಅಧ್ಯಕ್ಷರೆ, ೧೯೮೭ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ, ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

"೧೯೮೭ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ದೊರಕಿತು.

ಅಧ್ಯಕ್ಷರು.—ಇವತ್ತೇ ತಮ್ಮ ಚರ್ಚೆಯನ್ನು ತೆಗೆದುಕೊಳ್ಳೋಣವೇ ನಾಳೆ ತೆಗೆದುಕೊಳ್ಳೋಣವೇ ಇನ್ನೊಮ್ಮೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಏಕೆ ? ಹೌಸ್ ಈಗ ಅಡ್ಜರ್ನ್ ಮಾಡುತ್ತೀರಾ ?

ಅಧ್ಯಕ್ಷರು.—ಈಗ ೪-೧೦ ಆಯಿತು. ನಾಳೆಯಾದರೆ ಹೆಚ್ಚು ಕಡಿಮೆ ಟೈಮ್ ಸಿಗುತ್ತದೆ. ಸಬ್ಜೆಕ್ಟ್ ಬಹಳ ಮಹತ್ವದ್ದಿದೆ. ನಾಳೆ ಅರ್ಧ ತಾಸು, ಒಂದು ತಾಸು ಹೆಚ್ಚು ಕಡಿಮೆ ಮಾತನಾಡೋಣ. ಇವತ್ತಾದರೆ ೫ ಗಂಟೆ ಮೇಲೆ ಕೂಳತುಕೊಳ್ಳುವುದಕ್ಕಾಗುವುದಿಲ್ಲ. ಪ್ರೆಸ್‌ನವರು ಹೋಗಬೇಕು ಎಂದು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಪ್ರಾರಂಭ ಮಾಡೋಣ.

ಅಧ್ಯಕ್ಷರು.—ಪ್ರಾರಂಭ, ಉತ್ತರ ಎರಡೂ ಆಗಬೇಕು. ಸಭೆಯು ಅಭಿಪ್ರಾಯ ಚರ್ಚೆ, ಉತ್ತರ ಎರಡೂ ಆಗಬೇಕು ಎಂಬುದು. ಆದಕ್ಕೆ ಇವತ್ತೇ ಉತ್ತರ ಕೊಡಿಸಬೇಕು. ಸಬ್ಜೆಕ್ಟ್ ವಲುಗಿಯಬೇಕು ಇಲ್ಲ ಅಂದರೆ ನಾಳೆ ಅವಕಾಶ ಕೊಡುತ್ತೇನೆ. ಒಂದು ತಾಸು ಎರಡು ತಾಸು ಹೆಚ್ಚಾಗಲಿ.

ಶ್ರೀ ಧರ್ಮಸಿಂಗ್.—ಇವತ್ತೇ ಮಾಡಬೇಕು ಎಂದು ಕಂಡೀಷನ್ ಹಾಕುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಹೌದು. ಆ ರೀತಿ ನಿಯಮ ಇಲ್ಲವೇ ?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ.—ಇವತ್ತೇ ಆಗಬೇಕು. ನಾಳೆ ನಾನು ಉತ್ತರ ಕೊಡುವುದಕ್ಕೆ ತಯಾರಾಗಿಲ್ಲ.

ಶ್ರೀ ಧರ್ಮಸಿಂಗ್.—ಇವತ್ತೇ ಆಗಬೇಕು ಎಂದು ಕಂಡೀಷನ್ ಹಾಕುತ್ತೀರಾ ?

ನಿಯಮ 68ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ಇತ್ತೀಚೆಗೆ ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಸುಮಾರು ಒಂದು ತಾಸು ಚರ್ಚೆ ಆದಮೇಲೆ ಚರ್ಚೆಗೆ ಒಪ್ಪಿಕೊಂಡಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ದಲಿತರ ಮೇಲೆ ನಡೆದಂಥ ದೌರ್ಜನ್ಯ ಮತ್ತು ಆದಕ್ಕೆ ಪೋಲೀಸ್ ಇಲಾಖೆಯ ಕುಮ್ಮಕ್ಕು ಈ ವಿಚಾರದಲ್ಲಿ ನಾವು ಒಂದು ನಿಲುವಳಿ ಸೂಚನೆಯನ್ನು ತಮ್ಮ ಮುಂದೆ ಇಟ್ಟಿದ್ದೆವು. ಆದರೆ ತಾವು ಅದನ್ನು ರೂಲ್ ೬೮ಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ. ದಲಿತರ ಮೇಲೆ ಆಗಿರುವಂಥ ಅನೇಕ ಇನ್ಸಿಡೆಂಟ್ಸ್ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಬಂದಿದೆ. ಜೊತೆಯಲ್ಲಿ ಹೋದ ಅಧಿವೇಶನದಲ್ಲಿ ನಾವು ದಲಿತರ ಮೇಲೆ ಆಗತಕ್ಕ ಅನ್ಯಾಯ ಮತ್ತು ದಬ್ಬಾಳಿಕೆ, ಹಾಗೂ ಶೋಷಣೆ ಇದರ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದೆವು.

(ಉಪಾಧ್ಯಕ್ಷರು ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಾಗ ಒಂದು ಸದನದ ಸಮಿತಿಯನ್ನೇ ಮಾಡಬೇಕೆಂದು ಒತ್ತಾಯ ಮಾಡಿದೆವು. ಆದರೆ ಸರ್ಕಾರ ವಿಧಾನ ಮಂಡಲದಲ್ಲೇ ಇರತಕ್ಕ ಹರಿಜನ-ಗಿರಿಜನ ಕಲ್ಯಾಣ ಸಮಿತಿಯೇ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ನಿಜವಾಗಿಯೂ ಅಲ್ಲಿರತಕ್ಕ ಹರಿಜನ-ಗಿರಿಜನರ ಮೇಲೆ ಅನ್ಯಾಯ ಆಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿಕೊಂಡು ಬಂದು ವರದಿಯನ್ನು ಸದನಕ್ಕೆ ಸಲ್ಲಿಸಬೇಕೆಂಬ ಒಂದು ನಿರ್ಣಯ ಕೂಡ ಇಲ್ಲಿ ಆಯಿತು. ಅದರಂತೆ ಹರಿಜನ-ಗಿರಿಜನ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಡಾ. ಬಿ.ಎಂ. ತಿಪ್ಪೇಸ್ವಾಮಿಯವರ ನೇತೃತ್ವದಲ್ಲಿನ ಸಮಿತಿ ಘಟನೆ ನಡೆದ ಅನೇಕ ಸ್ಥಳಗಳಲ್ಲಿ ಭೇಟಿ ಕೊಟ್ಟು, ಅದರಲ್ಲೂ ಮುಖ್ಯವಾಗಿ ಬೆಂಡಿಗೇರಿ, ಕುಮ್ಮನಸಿರಸ್ಸಿ ಹಾಗೂ ಬಿದರೊಳ್ಳಿ ಈ ಮೂರು ಹಳ್ಳಿಗಳಿಗೂ ಎಸ್.ಸಿ.ಎಸ್.ಟಿ. ಕಲ್ಯಾಣ ಸಮಿತಿಯು ಭೇಟಿ ನೀಡಿ ವರದಿಯನ್ನು ಕೊಟ್ಟರು. ಅತ್ಯಂತ ಕಠಿಣವಾದ ಒಂದು ವರದಿಯನ್ನು ಕೊಟ್ಟರು ಅದು ದಿನಾಂಕ ೪-೧೧-೧೯೮೫ರಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಈ ಮೂರು ಇನ್ಸಿಡೆಂಟ್ಸ್‌ಗಳನ್ನು ನಾನು ಏಕೆ ತೆಗೆದುಕೊಂಡಿದ್ದೇನೆಂದರೆ, ನಾವು ಈ ಸದನದಲ್ಲಿ ಏನೇ ಆಪಾದನೆಗಳನ್ನು ಮಾಡಿದರೂ, ಅನೇಕ ಸಲ ಸರ್ಕಾರದವರು ಬಹಳ ಹಗುರವಾಗಿ ಹಾಗೂ ಲಘುವಾಗಿ ತೆಗೆದುಕೊಳ್ಳುತ್ತಾರೆ. ಏನೋ ವಿರೋಧ ಪಕ್ಷದವರು ಯಾವಾಗಲೂ ಚರ್ಚೆ ಮಾಡತಕ್ಕಂಥದ್ದು ಇಷ್ಟೆ, ಆದರಲ್ಲೇನೂ ಹುರುಳು ಇರುವುದಿಲ್ಲ. ಮತ್ತು ಅನೇಕ ಸಾರಿ ಚರ್ಚೆ ನಡೆಯುವಂತಹ ಕಾಲದಲ್ಲಿ ತಾವು ಕೂಡ ನೋಡಿದ್ದೀರಿ. ಆರೋಪ ಪ್ರತ್ಯಾರೋಪ ಮಾಡತಕ್ಕಂಥದ್ದು ಇದ್ದೇ ಇರುತ್ತದೆ ಆಗ ನಿಮ್ಮ ಕಾಲದಲ್ಲಿ ಆಗಿಲ್ಲವೆ ? ನೀವು ಹೆಚ್ಚು ಮಾಡಿಲ್ಲವೇ ಎಂಬುದಾಗಿ ನಮ್ಮ ಮೇಲೆ ಅವರು, ಅವರ ಮೇಲೆ ನಾವು. ಇಂತಹ ಪದಗಳನ್ನು ಬಳಸಿ ಒಬ್ಬರಿಗೊಬ್ಬರು ಚರ್ಚೆ ಮಾಡತಕ್ಕಂಥದ್ದು ಈ ಸದನದಲ್ಲಿ